ವಿಜಯ ಕರ್ನಾಟಕ ದಿನಪತ್ರಿಕೆ 04-04-2015

ಅರ್ಥಪೂರ್ಣ ಕಾರ್ಯಕ್ರಮಗಳ ಮೂಲಕ ಆಚರಿಸಲು ತೀರ್ಮಾನ

# ಜೆಎಸ್ಎಸ್ ಊಟಿ ರಸ್ತೆ ಕಾಲೇಜಿಗೆ 50ರ ಸಂಭ್ರಮ

**ಕುಂದೂರು ಉಮೇಶ ಭಟ್ಟ** ಮೈಸೂರು

ಐದು ದಶಕದಿಂದ ಸಾವಿರಾರು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಿದ ಜೆಎಸ್ಎಸ್ ಕಲಾ, ವಾಣಿಜ್ಯ ಹಾಗೂ ವಿಜ್ಞಾನ (ಊಟಿ ರಸ್ತೆ) ಕಾಲೇಜಿಗೆ ಈಗ ಸುವರ್ಣ ಮಹೋತ್ಸವ ಸಂಭ್ರಮ.

1964ರಲ್ಲಿ 52 ವಿದ್ಯಾರ್ಥಿಗಳು ಹಾಗೂ ಎಂಟು ನೌಕರರೊಂದಿಗೆ ಶುರುವಾದ ಕಾಲೇಜು ಅರ್ಧ ಶತಮಾನದಲ್ಲಿ ಹೆಮ್ಮರವಾಗಿ ಬೆಳೆದಿದೆ. 3600ಕ್ಕೂ ಹೆಚ್ಚು ವಿದ್ಯಾರ್ಥಿಗಳು ಇಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಪಿಯುಸಿಯ ಮೂರು, ಪದವಿಯ 6, ಸ್ನಾತಕೋತ್ತರ ಪದವಿಯ 10, ಸಂಶೋಧನೆಯ 4 ಹಾಗೂ ಡಿಪ್ಲೊಮಾ ಹಾಗೂ ಸ್ನಾತಕೋತ್ತರ ಡಿಪ್ಲೊಮಾದ 47 ಕೋರ್ಸ್‌ಗಳ ವ್ಯಾಸಂಗಕ್ಕೆ ಅವಕಾಶ ಕಲ್ಪಿಸಲಾಗಿದೆ. 200ಕ್ಕೂ ಹೆಚ್ಚು ಅಧ್ಯಾಪಕರು ಹಾಗೂ 60ಕ್ಕೂ ಹೆಚ್ಚು ಅಧ್ಯಾಪಕೇತರರು ಇಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಕ್ಯಾಂಪಸ್

1990–91ರ ಕಾಲೇಜಿನ ರಜತ ಮಹೋತ್ಸವದ ವೇಳೆ ದೇಶದ ದಿಗ್ಗಜರು ಭಾಗವಹಿಸಿದ್ದರು. ಪ್ರಧಾನಿಗಳಾಗಿದ್ದ ರಾಜೀವ್ ಗಾಂಧಿ, ವಿ.ಪಿ.ಸಿಂಗ್, ಮುಖ್ಯ ಮಂತ್ರಿಗಳಾದ ವೀರೇಂದ್ರಪಾಟೀಲ್, ರಾಮಕೃಷ್ಣ ಹೆಗಡೆ, ಎಸ್.ಆರ್. ಬೊಮ್ಮಾಯಿ, ಜೆ.ಎಚ್.ಪಟೇಲ್, ಸಾಹಿತಿಗಳಾದ ಶಿವರಾಮ ಕಾರಂತ, ಪ್ರೊ. ದೇಜಗೌ, ಡಾ.ಜಿ.ಎಸ್. ಶಿವರುದ್ರಪ್ಪ ಸಹಿತ ಹಲವರು ಪಾಲ್ಗೊಂಡಿದ್ದು ಈಗ ನೆನಪು. ಇದೇ ಸಡಗರದೊಂದಿಗೆ ಸುವರ್ಣ ಮಹೋತ್ಸವ ಸ್ಮರಣ ಸಂಚಿಕೆ ಪ್ರಕಟಣೆ, ವಿಶೇಷ ಉಪನ್ಯಾಸ ಮಾಲೆ, ರಾಷ್ಟ್ರಮಟ್ಟದ ವಿಚಾರಸಂಕಿರಣ ಮತ್ತು ಕಾರ್ಯಾಗಾರ, ರಾಜ್ಯಮಟ್ಟದ ವಿಜ್ಞಾನ ವಸ್ತು ಪ್ರದರ್ಶನ ಮತ್ತು ಸ್ಪರ್ಧೆ, ಸುವರ್ಣ ಮಹೋತ್ಸವ ದತ್ತಿಗಳ ಸ್ಥಾಪನೆ, ಸಾಕ್ಷ್ಯಚಿತ್ರ ನಿರ್ಮಾಣ, ಹಿರಿಯ ವಿದ್ಯಾರ್ಥಿಗಳ ಸಮಾವೇಶ ಆಯೋಜಿಸುವ ಉದ್ದೇಶ ಹೊಂದಿದೆ.



ಸಂಗ್ರಹ ಚಿತ್ರ

**1969ರಲ್ಲಿ ಜೆಎಸ್ಎಸ್ ಪದವಿ ಕಾಲೇಜಿನಲ್ಲಿ ಗ್ರಂಥಾಲಯ ಸೌಲಭ್ಯವನ್ನು ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಉದ್ಘಾಟಿಸಿದ್ದರು.**

**ಕಾಲೇಜು ರೂಪುಗೊಂಡಿದ್ದು ಹೀಗೆ...**

ಸ್ವಾತಂತ್ರ್ಯ ಬಂದು ದಶಕ ಕಳೆದಿದ್ದರೂ ಶಿಕ್ಷಣ ಎನ್ನುವುದು ಕೆಲವು ಕಡೆ ಗಗನ ಕುಸುಮವೇ ಆಗಿತ್ತು. ಜೆಎಸ್ಎಸ್ ಮಹಾವಿದ್ಯಾಪೀಠ ಆರಂಭಗೊಂಡ ದಶಕದ ಬಳಿಕ ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಆಶಯದಂತೆ 1964ರಲ್ಲಿ ಮೈಸೂರಿನ ರಾಮಾನುಜ ರಸ್ತೆಯಲ್ಲಿದ್ದ ಜೆಎಸ್ಎಸ್ ಪ್ರೌಢಶಾಲೆ ಪಕ್ಕದಲ್ಲಿ ಜೆಎಸ್ಎಸ್ ಕಾಲೇಜು ಪ್ರಾರಂಭಿಸಲಾಯಿತು. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದ್ದನ್ನು ಮನಗಂಡ ರಾಜೇಂದ್ರ ಸ್ವಾಮಿಜಿ 1972ರಲ್ಲಿ ಕಾಲೇಜಿಗೆ ಪ್ರತ್ಯೇಕ ಕಟ್ಟಡ ನಿರ್ಮಾಣ ಪ್ರಾರಂಭಿಸಿದರು. 1982 ರ ವೇಳೆಗೆ ಕಾಲೇಜಿಗೆ ನೆಲ ಮತ್ತು ಮೊದಲನೆ ಅಂತಸ್ತು, 1990ರ ವೇಳೆಗೆ 2ನೇ ಅಂತಸ್ತಿನ ಸುಸಜ್ಜಿತ ಕಟ್ಟಡ ಪೂರ್ಣಗೊಂಡಿತು. 1993ರಲ್ಲಿ ಜೆಎಸ್ಎಸ್ ಆಸ್ಪತ್ರೆಗೆ ಕಾಲೇಜು ಕಟ್ಟಡ ಬಿಟ್ಟುಕೊಟ್ಟು ಊಟಿ ರಸ್ತೆಯ 7.08 ಎಕರೆ ವಿಶಾಲಪ್ರದೇಶದಲ್ಲಿ ಹೊಸದಾಗಿ ನಿರ್ಮಿಸಲಾದ 3 ಅಂತಸ್ತುಗಳ ಕಟ್ಟಡಕ್ಕೆ ಕಾಲೇಜನ್ನು ಸ್ಥಳಾಂತರಿಸಲಾಯಿತು. ಈಗ 4ನೇ ಅಂತಸ್ತು ಒಳಗೊಂಡ ಕಟ್ಟಡದಲ್ಲಿ 59 ತರಗತಿ ಕೊಠಡಿ, ಆಡಿಯೋ ಮತ್ತು ವಿಡಿಯೋ ಕೊಠಡಿ, 35 ಪ್ರಯೋಗಾಲಯ, ವಿಶಾಲ ಗ್ರಂಥಾಲಯ, ಒಳ ಕ್ರೀಡಾಂಗಣ, ಮಹಿಳಾ ವಿದ್ಯಾರ್ಥಿನಿಲಯ ಹಾಗೂ 600 ಮಂದಿ ಕೂರಬಹುದಾದ ಸುವರ್ಣ ಸಭಾಂಗಣವೂ ಬಂದಿದೆ.

2001ರಲ್ಲಿ ಕಾಲೇಜು ನ್ಯಾಕ್ ಸಮಿತಿಯಿಂದ ಚತುರ್ಥಾ ಮಾನ್ಯತೆ, 2008 ಮತ್ತು 2013 ರಲ್ಲಿ ಮತ್ತೆ ಮನರ್ ಮೌಲ್ಯಮಾಪನಕ್ಕೆ ಒಳಪಟ್ಟು ಅದೇ ಸಮಿತಿಯಿಂದ ಎ ಗ್ರೇಡ್ ಮಾನ್ಯತೆ ಪಡೆದಿದೆ. 2005ರಲ್ಲಿ ಯುಜಿಸಿಯಿಂದ ಶೈಕ್ಷಣಿಕ ಸ್ವಾಯತ್ತತೆ, 2008ರಲ್ಲಿ ಯುಜಿಸಿ ಪ್ರಾಯೋಜಕತ್ವದ ಬುದ್ಧ ಅಧ್ಯಯನ ಕೇಂದ್ರ ಆರಂಭಿಸಲಾಗಿದೆ.

**ಹಳೆಯ ವಿದ್ಯಾರ್ಥಿಗಳ ಸಾಲು...**

ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿದ ಲಕ್ಷಾಂತರ ವಿದ್ಯಾರ್ಥಿಗಳಲ್ಲಿ ಕೆಲವರು ಸಮಾಜದ ವಿವಿಧ ಸ್ತರಗಳಲ್ಲಿ ಗುರುತಿಸಿಕೊಂಡಿದ್ದಾರೆ. ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಈ ಕಾಲೇಜಿನ ವಿದ್ಯಾರ್ಥಿ ಹಾಗೂ ಕೆಲಕಾಲ ಅಧ್ಯಾಪನ ಮಾಡಿದ್ದು ಇಲ್ಲಿಯೇ. ಹಾಲಿ ಸಚಿವ ಎಚ್.ಎಸ್. ಮಹಾದೇವಪ್ರಸಾದ್, ಮಾಜಿ ಸಚಿವರಾದ ಅಡಗೂರು ಎಚ್ ವಿಶ್ವನಾಥ್, ಗಾಯಕ ವಿಜಯಪ್ರಕಾಶ್, ಕಥೆಗಾರ್ತಿ ಡಾ. ಎಸ್.ಎ.ರಾಮದಾಸ್, ಪಿಟೀಲು ವಾದಕ ಎಂ.ಎಸ್. ವೇದಾ ಕಾಲೇಜಿನ ಹಳೆ ಡಾ.ಮೈಸೂರು ಎಂ. ಮಂಜುನಾಥ್, ಹಿನ್ನೆಲೆ ವಿದ್ಯಾರ್ಥಿಗಳು.

ಕಾಲೇಜು ಸ್ಥಾಪನೆಯಾಗಿ 50 ಸಂವತ್ಸರ ತುಂಬಿರುವ ಸವಿನೆನಪಿಗೆ 2014–15ನೇ ಶೈಕ್ಷಣಿಕ ವರ್ಷದಲ್ಲಿ ಸುವರ್ಣ ಮಹೋತ್ಸವವನ್ನು ಅರ್ಥಪೂರ್ಣ ಕಾರ್ಯಕ್ರಮಗಳ ಮೂಲಕ ಆಚರಿಸಲು ತೀರ್ಮಾನಿಸಲಾಗಿದೆ. ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಆಶೀರ್ವಾದ, ಮಹಾವಿದ್ಯಾಪೀಠದ ಸೂಕ್ತ ಮಾರ್ಗದರ್ಶನದಲ್ಲಿ ವರ್ಷವಿಡೀ ವಿಶೇಷ ಕಾರ್ಯಕ್ರಮ ಕೈಗೊಳ್ಳಲು ಪೂರ್ವಭಾವಿ ಸಿದ್ಧತೆ ನಡೆಯುತ್ತಿವೆ.

**-ಪ್ರೊ.ಮಲ್ಲಿಕಾರ್ಜುನ ಪಂಡಿತ್**, ಪ್ರಾಂಶುಪಾಲ



ಸಂಗ್ರಹ ಚಿತ್ರ

**ಮೈಸೂರಿನ ಊಟಿ ರಸ್ತೆಯ ಜೆಎಸ್ಎಸ್ ಕಾಲೇಜಿನ ರಜತಮಹೋತ್ಸವ ವೇಳೆ ಮಾಜಿ ಪ್ರಧಾನಿ ರಾಜೀವ್‌ಗಾಂಧಿ ಅವರೊಂದಿಗೆ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಂವಾದ ನಡೆಸಿದ ಸಂದರ್ಭ.**

ವಿಜಯವಾಣಿ ದಿನಪತ್ರಿಕೆ 04-04-2015

# ಸುವರ್ಣ ಸಂಭ್ರಮದಲ್ಲಿ ಜೆಎಸ್ಎಸ್ ಕಾಲೇಜು

## ■ 1964ರಲ್ಲಿ ಪಿಯು ಆರಂಭ ■ ಹಂತ ಹಂತವಾಗಿ ಪದವಿ, ಸ್ನಾತಕೋತ್ತರ ಪದವಿ ತರಗತಿಗಳು ಸೇರ್ಪಡೆ

■ ರಂಗಸ್ವಾಮಿ ಎಂ.ಮಾದಾಪುರ

**ಮೈಸೂರು:** ನಗರದ ಊಟಿ ರಸ್ತೆಯಲ್ಲಿರುವ ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಏ.8ರಂದು ಸುವರ್ಣ ಮಹೋತ್ಸವ ಆಚರಿಸಿಕೊಳ್ಳುತ್ತಿದೆ.

ರಾಮಾನುಜ ರಸ್ತೆಯ ಅನೆಕರೋಟಿ ಆವರಣದಲ್ಲಿ ವಿಜ್ಞಾನ ವಿಭಾಗದ ಕೇವಲ 52 ವಿದ್ಯಾರ್ಥಿಗಳೊಂದಿಗೆ ಆರಂಭವಾದ ಜೆಎಸ್ಎಸ್ ಪದವಿ ಪೂರ್ವ ಕಾಲೇಜು ನಂತರ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಾಗಿ ರೂಪುಗೊಂಡು ಊಟಿ ರಸ್ತೆಗೆ ಸ್ಥಳಾಂತರಗೊಂಡಿತು. ಇದೀಗ ಬರೋಬ್ಬರಿ 3,600 ವಿದ್ಯಾರ್ಥಿಗಳಿಗೆ ಕಾಲೇಜು 'ಅಕ್ಷರ ದಾಸೋಹ' ನೀಡುತ್ತಿದೆ.

ಸುತ್ತೂರು ಮಠದ ಲಿಂಗೈಕ್ಯ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ದೂರದರ್ಶಿತ್ವದ ಫಲವಾಗಿ 1964ರಲ್ಲಿ ಪದವಿ ಪೂರ್ವ ಕಾಲೇಜು ಆರಂಭವಾಯಿತು. ಆಗ ಕಾಲೇಜಿನಲ್ಲಿ 52 ವಿದ್ಯಾರ್ಥಿಗಳು, 8 ಅಧ್ಯಾಪಕರು ಮತ್ತು 3 ಅಧ್ಯಾಪಕೇತರರು ಮಾತ್ರ ಇದ್ದರು. 1965ರಲ್ಲಿ ಬಿಎಸ್ಸಿ, 1966ರಲ್ಲಿ ಬಿಎ, 1967ರಲ್ಲಿ ಬಿಕಾಂ ತರಗತಿಗಳು ಸೇರ್ಪಡೆಗೊಂಡವು. ಅಷ್ಟರಲ್ಲಾಗಲೆ ಪಿಯುಸಿಯಲ್ಲೂ ಕಲಾ, ವಾಣಿಜ್ಯ ತರಗತಿಗಳು ಆರಂಭವಾಗಿದ್ದವು.

ವಿದ್ಯಾರ್ಥಿಗಳ ಪ್ರಮಾಣಕ್ಕೆ ಅನುಗುಣವಾಗಿ ಕೊಠಡಿ, ಪ್ರಯೋಗಾಲಯ, ಗ್ರಂಥಾಲಯ ವ್ಯವಸ್ಥೆ ಮಾಡಬೇಕಾದ ಅನಿವಾರ್ಯತೆ ಅರಿತ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ, 1972ರಲ್ಲಿ ಭಕ್ತರಿಂದ ಸಂಪನ್ಮೂಲ ಸಂಗ್ರಹಿಸಿ ಕಾಲೇಜಿಗೆ ಪ್ರತ್ಯೇಕ ಕಟ್ಟಡ ನಿರ್ಮಿಸಲು ಪ್ರಾರಂಭಿಸಿದರು. 1982ರ ವೇಳೆಗೆ ನೆಲ ಮತ್ತು ಮೊದಲನೆಯ ಅಂತಸ್ತು ಹಾಗೂ 1990ರ ವೇಳೆಗೆ ಎರಡನೇ ಅಂತಸ್ತು (ಈಗಿನ ಜೆಎಸ್ಎಸ್ ಆಸ್ಪತ್ರೆ ಹಳೆ ಕಟ್ಟಡ) ನಿರ್ಮಾಣವಾಯಿತು.

**ಬೆಳ್ಳಿ ಹಬ್ಬ:** 1990-91ರ ಶೈಕ್ಷಣಿಕ ಸಾಲಿನಲ್ಲಿ ನಡೆದ ಕಾಲೇಜಿನ ರಜತ ಮಹೋತ್ಸವದಲ್ಲಿ ಮಾಜಿ ಪ್ರಧಾನಿಗಳಾದ ರಾಜೀವ್‌ಗಾಂಧಿ, ವಿ.ಪಿ.ಸಿಂಗ್, ಮಾಜಿ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆ, ಜೆ.ಎಚ್.ಪಟೇಲ್, ಎಸ್.ಆರ್.ಬೊಮ್ಮಾಯಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಶಿವರಾಮ ಕಾರಂತ, ರಾಷ್ಟ್ರಕವಿ ಡಾ.ಜಿ.ಎಸ್.ಶಿವರುದ್ರಪ್ಪ ಭಾಗವಹಿಸಿದ್ದರು.

**ಸ್ಥಳಾಂತರ:** 1993ರಲ್ಲಿ ಆರಂಭವಾದ ಜೆಎಸ್ಎಸ್ ಆಸ್ಪತ್ರೆಗೆ ಕಾಲೇಜು ಕಟ್ಟಡವನ್ನು ಬಿಟ್ಟುಕೊಡಲಾಯಿತು. ಊಟಿ ರಸ್ತೆಯಲ್ಲಿರುವ ಸುಮಾರು 7.8 ಎಕರೆ ವಿಶಾಲ ಪ್ರದೇಶದಲ್ಲಿ ನಿರ್ಮಿಸಲಾಗಿದ್ದ ಮೂರು ಅಂತಸ್ತಿನ ಸುಸಜ್ಜಿತ ಕಟ್ಟಡಕ್ಕೆ ಕಾಲೇಜು ಸ್ಥಳಾಂತರಗೊಂಡಿತು.

**ಪ್ರಸ್ತುತ ಸ್ಥಿತಿ:** 2001ರಲ್ಲಿ ಪದವಿಪೂರ್ವ ಹಾಗೂ ಪದವಿ ಕಾಲೇಜುಗಳು ಪ್ರತ್ಯೇಕಗೊಂಡವು. ಸದ್ಯ ಕಾಲೇಜಿನ ಪಿಯುಸಿ ವಿಭಾಗದಲ್ಲಿ 1,100, ಪದವಿಯಲ್ಲಿ 1,600, ಸ್ನಾತಕೋತ್ತರ ವಿಭಾಗದಲ್ಲಿ 900 ಸೇರಿದಂತೆ ಒಟ್ಟು 3,600 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. 200ಕ್ಕೂ ಹೆಚ್ಚು ಅಧ್ಯಾಪಕರು ಹಾಗೂ 60ಕ್ಕೂ ಹೆಚ್ಚು ಅಧ್ಯಾಪಕೇತರ ಸಿಬ್ಬಂದಿ ಸೇವೆ ಸಲ್ಲಿಸುತ್ತಿದ್ದಾರೆ.

ಸುತ್ತೂರು ಮಠದ ಪ್ರಸ್ತುತ ಪೀಠಾಧಿಪತಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಹಕಾರ ಸಚಿವ ಎಚ್.ಎಸ್.ಮಹದೇವಪ್ರಸಾದ್, ಸಾಹಿತಿ ಡಾ.ಎಂ.ಎಸ್.ವೇದಾ, ವಿದ್ವಾನ್ ಡಾ.ಮೈಸೂರು ಮಂಜುನಾಥ್, ಬಾಲಿವುಡ್ ಗಾಯಕ ವಿಜಯಪ್ರಕಾಶ್ ಇದೇ ಕಾಲೇಜಿನ ವಿದ್ಯಾರ್ಥಿಗಳು.



ಊಟಿ ರಸ್ತೆಯ ಜೆಎಸ್ಎಸ್ ಕಾಲೇಜು ಕಟ್ಟಡ.

### ಮುಖ್ಯಮಂತ್ರಿ ಆಗಮನ

**ಮೈಸೂರು:** ಏ.8ರಂದು ಬೆಳಗ್ಗೆ 10.30ಕ್ಕೆ ಕಾಲೇಜು ಆವರಣದಲ್ಲಿ ನಡೆಯುವ ಸುವರ್ಣ ಮಹೋತ್ಸವದಲ್ಲಿ ಸಿಎಂ ಸಿದ್ದರಾಮಯ್ಯ, ಸಚಿವರಾದ ವಿ.ಶ್ರೀನಿವಾಸಪ್ರಸಾದ್, ಎಚ್.ಎಸ್.ಮಹದೇವ ಪ್ರಸಾದ್, ಡಾ.ಎಚ್. ಸಿ.ಮಹದೇವಪ್ಪ, ಸಂಸದ ಪ್ರತಾಪ್ ಸಿಂಹ, ಮಾಜಿ ಸಂಸದ ಎಚ್.ವಿಶ್ವನಾಥ್, ಶಾಸಕ ಎಂ.ಕೆ.ಸೋಮಶೇಖರ್, ಮೇಯರ್ ಆರ್.ಲಿಂಗಪ್ಪ ಭಾಗವಹಿಸಲಿದ್ದಾರೆ. ವರ್ಷಪೂರ್ತಿ ವೈವಿಧ್ಯಮಯ ಕಾರ್ಯಕ್ರಮಗಳ ಮೂಲಕ ಸುವರ್ಣ ಸಂಭ್ರಮಕ್ಕೆ ಸಿದ್ಧತೆ ನಡೆಸಲಾಗಿದೆ.

### ಮೈಲುಗಲ್ಲುಗಳು

- 2001ರಿಂದ 13ರವರೆಗೆ ಒಟ್ಟು 10 ಸ್ನಾತಕೋತ್ತರ ಪದವಿ ಆರಂಭ
- 2005ರಲ್ಲಿ ಸ್ವಾಯತ್ತತೆ
- 2008ರಲ್ಲಿ 'ನ್ಯಾಕ್'ನಿಂದ ಎ ಗ್ರೇಡ್ ಮಾನ್ಯತೆ
- 2010ರಲ್ಲಿ ಯುಜಿಸಿಯಿಂದ 'ಕಾಲೇಜ್ ವಿತ್ ಪೊಟೆನ್ಷಿಯಲ್ ಫಾರ್ ಎಕ್ಸಲೆನ್ಸ್' ಪರಿಗಣನೆ


ಕನ್ನಡಪ್ರಭ ದಿನಪತ್ರಿಕೆ 04-04-2015

# ಜೆಎಸ್‌ಎಸ್ ಸುವರ್ಣ ಮಹೋತ್ಸವ 8ರಂದು

• ವಿಶೇಷ ವರದಿ

ಮೈಸೂರು: ನಗರದ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಏ.8 ರಂದು ಸುವರ್ಣ ಮಹೋತ್ಸವ ಆಚರಿಸಿಕೊಳ್ಳುತ್ತಿದೆ.

**ತಾಂತ್ರಿಕ, ವೈದ್ಯಕೀಯ ಧಾರ್ಮಿಕ, ಸಾಹಿತ್ಯ, ಕಲೆ ಹೀಗೆ ಹಲವಾರು ವಿಷಯಗಳಿಗೆ ಸಂಬಂಧಿಸಿದಂತೆ 350ಕ್ಕೂ ಹೆಚ್ಚು ಸಂಸ್ಥೆಗಳು ದೇಶ ವಿದೇಶಗಳಲ್ಲಿ ಸೇವೆ ಸಲ್ಲಿಸುತ್ತಿವೆ.**



ಸುತ್ತೂರುಶ್ರೀಕ್ಷೇತ್ರದಶ್ರೀವೀರಸಿಂಹಾಸನ ಮಹಾಸಂಸ್ಥಾನ ಮಠದ 23ನೇ ಪೀಠಾಧಿಪತಿ ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ತಮ್ಮ ಹಿರಿಯ ಗುರುಗಳಾದ ಮಂತ್ರ ಮಹರ್ಷಿ ಶಿವರಾತ್ರೀಶ್ವರ ಸ್ವಾಮೀಜಿಗಳ ಮಾರ್ಗದರ್ಶನದಲ್ಲಿ ಶ್ರೀಮಠದ ಸೇವಾಕ್ಷೇತ್ರಗಳನ್ನು ನಾಡಿನ ಉದ್ದಗಲಕ್ಕೂ ವಿಸ್ತಾರಗೊಳಿಸಿದರು. ಬಡ ವಿದ್ಯಾರ್ಥಿಗಳಿಗೆ ಉಚಿತ ವಸತಿ ನೀಡುವುದರೊಂದಿಗೆ ಪ್ರಾರಂಭಿಸಿ ಮುಂದೆ ಪ್ರಸಾದ ನಿಲಯಗಳು, ಶಿಶುಪಾಲನ ಕೇಂದ್ರ ಗಳ ಜೊತೆಗೆ 1954ರಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠವನ್ನು ಸಂಸ್ಥಾಪಿಸಿದರು. ಇದರ ಆಶ್ರಯದಲ್ಲಿ ಸಾಮಾನ್ಯ ಶಿಕ್ಷಣ, ತಾಂತ್ರಿಕ, ವೈದ್ಯಕೀಯ ಧಾರ್ಮಿಕ, ಸಾಹಿತ್ಯ, ಕಲೆ ಹೀಗೆ ಹಲವಾರು ವಿಷಯಗಳಿಗೆ ಸಂಬಂಧಿಸಿದಂತೆ 350ಕ್ಕೂ ಹೆಚ್ಚು ಸಂಸ್ಥೆಗಳು ಇಂದು ದೇಶ-ವಿದೇಶಗಳಲ್ಲಿ ಸೇವೆ ಸಲ್ಲಿಸುತ್ತಿವೆ.

ಈಗ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು 1964ರಲ್ಲಿ ರಾಮಾ ನುಜ ರಸ್ತೆಯ ಆನೆ ಕರೋಟಿಯ ಆವರಣದಲ್ಲಿ ಪ್ರಾರಂಭವಾಯಿತು. ಮೊದಲಿಗೆ 52 ವಿದ್ಯಾರ್ಥಿಗಳು ಮತ್ತು 11 ಮಂದಿ ಬೋಧಕ, ಬೋಧಕೇತರರಿದ್ದರು. ಪಿಯುಸಿ ತರಗತಿಯಿಂದ ಪ್ರಾರಂಭವಾದ ಈ ಕಾಲೇಜಿನಲ್ಲಿ ಅನಂತರ ವಿಜ್ಞಾನ, ಕಲಾ, ವಾಣಿಜ್ಯ ಹಾಗೂ ವ್ಯವಹಾರ ನಿರ್ವಹಣ ಪದವಿ ತರಗತಿಗಳು ಆರಂಭಗೊಂಡವು. 1990 ರಲ್ಲಿ ಕಾಲೇಜಿನ ರಜತ ಮಹೋತ್ಸವವನ್ನು ಮಾಜಿ ಪ್ರಧಾನ ರಾಜೀವ್‌ಗಾಂಧಿ ಉದ್ಘಾಟಿಸಿದರು. 1991 ರಲ್ಲಿ ನಡೆದ ಸಮಾರೋಪ ಸಮಾರಂಭಕ್ಕೆ ಮಾಜಿ ಪ್ರಧಾನಿ ವಿ.ಪಿ. ಸಿಂಗ್ ಆಗಮಿಸಿದ್ದರು.

ಮೈಸೂರು ಊಟಿ ರಸ್ತೆಯ ಏಳು ಎಕರೆ ಪ್ರದೇಶದಲ್ಲಿ 1993 ರಲ್ಲಿ ನಿರ್ಮಿಸಲಾದ ಕಟ್ಟಡಕ್ಕೆ ಈ ಕಾಲೇಜು ಸ್ಥಳಾಂತರಿಸಲಾಯಿತು. ಅಂದಿನ ರಾಷ್ಟ್ರಪತಿಗಳಾದ ಡಾ. ಶಂಕರ ದಯಾಳ ಶರ್ಮ ಅವರು ಕಟ್ಟಡವನ್ನು ಉದ್ಘಾಟಿಸಿದರು. ನಂತರ ಸುವರ್ಣ ಮಹೋತ್ಸವದ ಅಂಗವಾಗಿ ನಿರ್ಮಿಸಲಾದ ಸಭಾಂಗಣದ ಉದ್ಘಾಟನೆಯನ್ನು 2013ರಲ್ಲಿ ಮಾಜಿ ರಾಷ್ಟ್ರಪತಿಗಳಾದ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಅವರು ನೆರವೇರಿಸಿದರು.

ಕಾಲೇಜಿನಲ್ಲಿ ಇಂದು ಒಟ್ಟು 3,600 ವಿದ್ಯಾರ್ಥಿಗಳು, 190 ಬೋಧಕರು ಹಾಗೂ 70 ಮಂದಿ ಬೋಧಕೇತರ ಸಿಬ್ಬಂದಿ ಇದ್ದಾರೆ.

ಏ.8 ರಂದು ಬೆಳಗ್ಗೆ 10.30ಕ್ಕೆ ನಡೆಯುವ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಮುಖ್ಯಮಂತ್ರಿ ಸಿದ್ದರಾಮಯ್ಯ ಸುವರ್ಣ ಮಹೋತ್ಸವ ಮತ್ತು ಸ್ನಾತಕೋತ್ತರ ಕೇಂದ್ರದ 3ನೇ ಮಹಡಿ ಉದ್ಘಾಟಿಸುವರು. ಸಹಕಾರ ಸಚಿವ ಎಚ್.ಎಸ್. ಮಹದೇವ ಪ್ರಸಾದ್ ಮಹಿಳಾ ವಿದ್ಯಾರ್ಥಿನಿಲಯದ 2ನೇ ಮಹಡಿ ಉದ್ಘಾಟಿಸುವರು. ಸಂಸದ ಪ್ರತಾಪ್ ಸಿಂಹ ವ್ಯಾಯಾಮಶಾಲೆ, ಒಳ ಕ್ರೀಡಾಂಗಣ ಉದ್ಘಾಟಿಸುವರು. ಮಾಜಿ ಸಂಸದ ಎಚ್. ವಿಶ್ವನಾಥ್ ಕಮ್ಯುನಿಟಿ ಕಾಲೇಜು, ಡಿಪ್ಲೊಮಾ ಕೋರ್ಸ್ ಪರಿಚಯ ಪತ್ರ ಬಿಡುಗಡೆ ಮಾಡುವರು. ಕಂದಾಯ ಸಚಿವ ವಿ. ಶ್ರೀನಿವಾಸ ಪ್ರಸಾದ್ ಅಧ್ಯಕ್ಷತೆ ವಹಿಸುವರು. ಲೋಕೋಪಯೋಗಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಆ್ಯನಿಮೇಷನ್ ಪ್ರಯೋ ಗಾಲಯ ಉದ್ಘಾಟಿಸುವರು. ಶಾಸಕ ಎಂ.ಕೆ. ಸೋಮಶೇಖರ್ ಕೌಶಲ್ಯಾಧಾರಿತ ಕೋರ್ಸ್ ವೆಬ್‌ಸೈಟ್ ಬಿಡುಗಡೆ ಮಾಡುವರು. ಮೇಯರ್ ಆರ್. ಲಿಂಗಪ್ಪ ಕೌಶಲ್ಯಾಧಾರಿತ ಪದವಿ ಕೋರ್ಸ್ ಪರಿಚಯಪತ್ರ ಬಿಡುಗಡೆ ಮಾಡುವರು

DECCAN HERALD · 04-04-2015

# City college completes 50 years; CM to grace the event

**MYSURU: JSS College of Arts, Science and Commerce, on Ooty Road, here, has completed 50 years. Chief Minister Siddaramaiah will grace the ceremony, a milestone in the history of the college on April 8 at 10.30 am.**

According to a release from M B Mallikarjun Pandit, principal of the college, in 1964, the then pontiff of Suttur mutt Shivaratri Rajendra Swami started the college on Ramanuja road. Then, it had only Science course in PUC level, with a total of 52 students and eight teaching faculty. Later, BSc in Science was introduced, followed by Commerce and Arts in PU level. Besides, the three-room college was expanded to a two-storey building in 1990, that was later handed over to the hospital, in 1993. The college was shifted to a spacious 7.8 acre campus, where the institution stands now. A wide range of programmes — more than 60 courses (4 PhD, 10 PG, 8 PG Diploma, 6 UG with 23 combinations, one diploma and one foundation course is offered with 33 COC programmes) — for 2,700 students, including 900 postgraduate students, besides 136 teaching faculty members and 59 non-teaching staffers.

The library has a cornucopia of books, magazines and journals worth Rs 91.63 lakh against the measly stock of books worth Rs 2,913 at the time of its inception.



**Previous pontiff of Suttur mutt Shivaratri Rajendra Swami inaugurates the college building in 1964.**



**Former prime minister Rajiv Gandhi interacts with Suttur seer Shivaratri Deshikendra Swami during the silver jubilee celebrations of JSS College of Arts, Science and Commerce, on Ooty road.** PIC BY SPECIAL ARRANGEMENT

In 2001, the PU College became independent, while the degree college was accredited by NAAC with four star grade in 2001. PG in Social Work was introduced the same year. Other achievements include, recognition of Autonomous Status by UGC in 2005, re-accredited by NAAC with 'A' grade in 2008 and recognition of 'College with Potential for Excellence' in 2010.

JSS Mahavidyapeeth, headed by pontiff of Suttur mutt Shivarathri Deshikendra Swami heads the 350 strong institutions, including engineering, medical, dental, pharmacy and law colleges that have also become autonomous.

**DH News Service**

ಪ್ರಜಾನುಡಿ ದಿನಪತ್ರಿಕೆ 06-04-2015

# ಏ.8ಕ್ಕೆ ಜೆಎಸ್‌ಎಸ್ ಕಾಲೇಜು ಸುವರ್ಣ ಮಹೋತ್ಸವ

ಮೈಸೂರು: ನಗರದ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿಗೆ 50 ವರ್ಷಗಳು ತುಂಬಿರುವ ಸಂದರ್ಭದಲ್ಲಿ ಏ.8ರಂದು ಬೆಳಗ್ಗೆ 10.30ಕ್ಕೆ ಕಾಲೇಜಿನ ಸುವರ್ಣ ಮಹೋತ್ಸವ ಉದ್ಘಾಟನಾ ಸಮಾರಂಭ ನಡೆಯಲಿದೆ.

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕಾಲೇಜಿನ ಸುವರ್ಣ ಮಹೋತ್ಸವ ಮತ್ತು ಸ್ನಾತಕೋತ್ತರ ಕೇಂದ್ರದ ಮೂರನೆಯ ಮಹಡಿಯನ್ನು ಉದ್ಘಾಟಿಸುವರು ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಎಸ್.ಪಿ. ಮಂಜುನಾಥ್ ಭಾನುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ವಿ.ಶ್ರೀನಿವಾಸ ಪ್ರಸಾದ್ ಅಧ್ಯಕ್ಷತೆ ವಹಿಸಲಿದ್ದು, ಸಚಿವ ಎಚ್.ಎಸ್. ಮಹದೇವ ಪ್ರಸಾದ್ ಅವರು ಮಹಿಳಾ ವಿದ್ಯಾರ್ಥಿ ನಿಲಯವನ್ನು, ಲೋಕೋಪಯೋಗಿ ಸಚಿವ ಡಾ. ಎಚ್.ಸಿ. ಮಹದೇವಪ್ಪ ಅನಿಮೇಷನ್ ಪ್ರಯೋಗಾಲಯವನ್ನು ಹಾಗೂ ಸಂಸದ ಪ್ರತಾಪ್ ಸಿಂಹ ಅವರು ವ್ಯಾಯಾಮ ಶಾಲೆ ಮತ್ತು ಒಳಕ್ರೀಡಾಂಗಣ ಉದ್ಘಾಟಿಸಲಿದ್ದಾರೆ ಎಂದು ಹೇಳಿದರು.

ಶಾಸಕ ಎಂ.ಕೆ.ಸೋಮಶೇಖರ್ ಕೌಶಲ್ಯಾಧಾರಿತ ಕೋರ್ಸ್‌ಗಳ ವೈಬ್‌ಸೈಟ್ ಅನ್ನು, ಮೇಯರ್ ಆರ್.ಲಿಂಗಪ್ಪ ಕೌಶಲ್ಯಾಧಾರಿತ ಪದವಿ ಕೋರ್ಸ್‌ಗಳ ಪರಿಚಯ ಪತ್ರವನ್ನು ಹಾಗೂ ಮಾಜಿ ಸಚಿವ ಎ.ಎಚ್.ವಿಶ್ವನಾಥ್ ಕಮ್ಯುನಿಟಿ ಕಾಲೇಜು ಹಾಗೂ ಅಡ್ವಾನ್ಸಡ್ ಡಿಪ್ಲೊಮಾ ಕೋರ್ಸ್‌ಗಳ ಪರಿಚಯ ಪತ್ರವನ್ನು ಬಿಡುಗಡೆ ಮಾಡಲಿದ್ದಾರೆ ಎಂದು ತಿಳಿಸಿದರು.

**ಉಪನ್ಯಾಸ, ವಿಚಾರ ಸಂಕಿರಣ:** ಸುವರ್ಣ ಮಹೋತ್ಸವದ ಅಂಗವಾಗಿ ವಿಶೇಷ ಉಪನ್ಯಾಸ ಮಾಲೆ, ಸಂಸ್ಕರಣ ಗ್ರಂಥ, ವಿಜ್ಞಾನ ವಸ್ತುಪ್ರದರ್ಶನ ಮತ್ತು ಸ್ಪರ್ಧೆ, ವಿಚಾರ ಸಂಕಿರಣ ಮತ್ತು ಕಾರ್ಯಾಗಾರವನ್ನು ಒಂದು ವರ್ಷದ ಅವಧಿಯವರೆಗೆ ವ್ಯವಸ್ಥೆ ಮಾಡಲಾಗುತ್ತದೆ. ಹಿರಿಯ ವಿದ್ಯಾರ್ಥಿಗಳ ಸಮಾವೇಶ, ಸಾಂಸ್ಕೃತಿಕ ಸ್ಪರ್ಧೆ, ನಿವೃತ್ತರಾದ ಹಾಗೂ ವರ್ಗಾವಣೆಗೊಂಡ ನೌಕರ ಸಮಾವೇಶ, ದತ್ತಿಗಳ ಸ್ಥಾಪನೆ ಇತ್ಯಾದಿ ಕಾರ್ಯಕ್ರಮಗಳನ್ನು ವರ್ಷವಿಡೀ ಆಯೋಜಿಸಲಾಗುತ್ತದೆ ಎಂದು ಮಾಹಿತಿ ನೀಡಿದರು.

**3600 ವಿದ್ಯಾರ್ಥಿಗಳು, 190 ಬೋಧಕರು:** ಸುತ್ತೂರು ಶ್ರೀಮಠದ 23ನೇ ಪೀಠಾಧಿಪತಿ ಡಾ. ಶ್ರೀ ಶಿವರಾತ್ರಿರಾಜೇಂದ್ರ ಸ್ವಾಮೀಜಿ ಅವರ ದೂರದರ್ಶಿತ್ವದ ಫಲವಾಗಿ ಮೈಸೂರಿನ ರಾಮಾನುಜ ರಸ್ತೆಯಲ್ಲಿನ ಆನೆಕರೋಟಿಯ ಆವರಣದಲ್ಲಿ 1964ರಲ್ಲಿ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಪ್ರಾರಂಭವಾಯಿತು.

ಕೇವಲ 52 ವಿದ್ಯಾರ್ಥಿಗಳು ಮತ್ತು 11ಮಂದಿ ಸಿಬ್ಬಂದಿ ವರ್ಗದಿಂದ ಪ್ರಾರಂಭವಾದ ಈ ಕಾಲೇಜಿನಲ್ಲಿ ಇಂದು ಪಿಯುಸಿ, ಪದವಿ, ಸ್ನಾತಕೋತ್ತರ ವಿಭಾಗಗಳಿದ್ದು, ನಾಲ್ಕು ವಿಭಾಗಗಳಲ್ಲಿ ಉನ್ನತ ಮಟ್ಟದ ಸಂಶೋಧನೆ ನಡೆಸಲು ಅವಕಾಶವಿದೆ. 3,600 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಇಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು, 190 ಬೋಧಕರು ಮತ್ತು 70 ಮಂದಿ ಬೋಧಕೇತರರು ಇದ್ದಾರೆ.


2010ರಲ್ಲಿ ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗದಿಂದ ಉತ್ಕೃಷ್ಟತಾ ಅಂತಸ್ಸಾಮರ್ಥ್ಯವುಳ್ಳ ಕಾಲೇಜು ಎಂದು ಪರಿಗಣಿತವಾಗಿದೆ. 2012ರಲ್ಲಿ ಸಂಸ್ಥೆಯು ಭಾರತ ಸರಕಾರದ ಜೈವಿಕ ತಂತ್ರಜ್ಞಾನ ಇಲಾಖೆಯ ಸ್ಟಾರ್ ಕಾಲೇಜು ಯೋಜನೆಯಲ್ಲಿ ಪರಿಗಣಿತವಾಗಿದೆ. 2014–15ನೇ ಸಾಲಿನಲ್ಲಿ ಯುಜಿಸಿ ಪ್ರಾಯೋಜಿತ ಕೌಶಲ್ಯಾಧಾರಿತ ಪದವಿ ಕೋರ್ಸ್‌ಗಳನ್ನು ಹಾಗೂ ಕಮ್ಯುನಿಟಿ ಕಾಲೇಜು ಸ್ಕೀಂನಲ್ಲಿ ಅಡ್ವಾನ್ಸಡ್ ಡಿಪ್ಲೋಮಾ ಕೋರ್ಸ್‌ಗಳನ್ನು ಪ್ರಾರಂಭಿಸಲಾಗಿದೆ ಎಂದು ತಿಳಿಸಿದರು.

ಕಾಲೇಜಿನ ಕಾರ್ಯನಿರ್ವಾಹಕ ಅಧಿಕಾರಿ ಪ್ರೊ. ಸಾಂಬಶಿವಯ್ಯ, ಪಿಯು ಕಾಲೇಜಿನ ಪ್ರಾಂಶುಪಾಲ ಸೋಮಶೇಖರಮೂರ್ತಿ, ಸದಾಶಿವಮೂರ್ತಿ, ಪದವಿ ಕಾಲೇಜು ಪ್ರಾಂಶುಪಾಲ ಪ್ರೊ. ಎಂ.ಬಿ. ಮಲ್ಲಿಕಾರ್ಜುನ ಪಂಡಿತ್ ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

ಪ್ರಜಾವಾಣಿ ದಿನಪತ್ರಿಕೆ 04-04-2015

# ಜೆಎಸ್‌ಎಸ್ ಕಾಲೇಜಿಗೆ ಸುವರ್ಣ ಸಂಭ್ರಮ

**ಊಟಿ ರಸ್ತೆಯ ಜೆಎಸ್‌ಎಸ್ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಕಾಲೇಜು ಶುರುವಾಗಿ 50 ವರ್ಷಗಳಾಯಿತು. ಅದರ ಸುವರ್ಣ ಮಹೋತ್ಸವ ಸಮಾರಂಭವನ್ನು ಏ. ೮ರಂದು ಬೆಳಿಗ್ಗೆ 10.30 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ. 50 ವರ್ಷಗಳ ಇತಿಹಾಸವನ್ನು ಹಿಡಿದಿಡುವುದು ಕಷ್ಟದ ಕೆಲಸ. ಆದರೂ ಅದು ಬೆಳೆದ ಬಗೆಯ ಹಕ್ಕಿನೋಟ ಇಲ್ಲಿದೆ.**



ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಾಲೇಜಿನ ಮುಖ್ಯ ಕಟ್ಟಡದ ವಿಹಂಗಮ ನೋಟ

ಗಣೇಶ ಅಮೀನಗಡ

ಅದು ಅರವತ್ತರ ದಶಕ. ಗ್ರಾಮೀಣ ಪ್ರದೇಶಗಳ ಬಡ ವಿದ್ಯಾರ್ಥಿಗಳಿಗೂ ಉನ್ನತ ಶಿಕ್ಷಣ ಸಿಗಬೇಕು ಎನ್ನುವ ಸಂಕಲ್ಪ ತೊಟ್ಟವರು ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿ. ಇದಕ್ಕಾಗಿ 1964ರಲ್ಲಿ ರಾಮಾನುಜ ರಸ್ತೆಯಲ್ಲಿದ್ದ ಜೆಎಸ್‌ಎಸ್ ಪ್ರೌಢಶಾಲೆಯ ಪಕ್ಕದಲ್ಲಿ ಜೆಎಸ್‌ಎಸ್ ಕಾಲೇಜು ಶುರು ಮಾಡಿದರು. ಆಗ ಪಿಯು ವಿಜ್ಞಾನ ವಿಷಯದಲ್ಲಿ 52 ವಿದ್ಯಾರ್ಥಿಗಳು, ಎಂಟು ಅಧ್ಯಾಪಕರು, ಮೂವರು ಅಧ್ಯಾಪಕೇತರ ಸಿಬ್ಬಂದಿಯಿಂದ ಕಾಲೇಜು ಆರಂಭಗೊಂಡಿತು. ಮರುವರ್ಷ ಬಿ.ಎಸ್ಸಿ ಪದವಿ ತರಗತಿಗಳೂ ಶುರುವಾದವು. ನಂತರ ಪಿಯುನಲ್ಲಿ ಕಲೆ, ವಾಣಿಜ್ಯ ವಿಷಯಗಳು ಆರಂಭಗೊಂಡವು. ಆಮೇಲೆ ಬಿ.ಎ, ಬಿ.ಕಾಂ ಪದವಿ ತರಗತಿಗಳು ಆರಂಭಗೊಂಡು ಜೆಎಸ್‌ಎಸ್ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಕಾಲೇಜಾಗಿ ಸಜ್ಜುಗೊಂಡಿತು.

ಮುಂದೆ ಬಿಬಿಎಂ ಪದವಿ ತರಗತಿ, ಪದವಿಯಲ್ಲಿ ಎಲೆಕ್ಟ್ರಾನಿಕ್, ಕಂಪ್ಯೂಟರ್ ಸೈನ್ಸ್ ಮೊದಲಾದ ವಿಷಯಗಳು ಸೇರಿಕೊಂಡವು. ಪ್ರತಿ ವರ್ಷ ವಿದ್ಯಾರ್ಥಿಗಳ ಹೆಚ್ಚಿದ್ದನ್ನು ಕಂಡ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ, 1972ರಲ್ಲಿ ಭಕ್ತರ ನೆರವಿನಿಂದ ಸಂಪನ್ಮೂಲವನ್ನು ಸಂಗ್ರಹಿಸಿ ಪ್ರೌಢಶಾಲೆಯ ಪಕ್ಕದಲ್ಲೇ ಕಾಲೇಜಿಗೆ ಪ್ರತ್ಯೇಕ ಕಟ್ಟಡ ನಿರ್ಮಿಸಿದರು. ಮತ್ತೆ 1982ರಲ್ಲಿ ಕಾಲೇಜಿಗೆ ನೆಲಅಂತಸ್ತು ಹಾಗೂ ಮೊದಲನೆಯ ಅಂತಸ್ತು ಕಟ್ಟಿಸಿದರು. 1990ರಲ್ಲಿ ಎರಡನೆಯ ಅಂತಸ್ತಿನ ಸುಸಜ್ಜಿತ ಕಟ್ಟಡ ಸಿದ್ಧಗೊಂಡಿತು. ಆದರೆ, 1993ರಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠ ಶುರು ಮಾಡಿದ ಆಸ್ಪತ್ರೆಗೆ ಕಾಲೇಜು ಕಟ್ಟಡವನ್ನು ಬಿಟ್ಟುಕೊಟ್ಟ ಪರಿಣಾಮ ಊಟಿ ರಸ್ತೆಯಲ್ಲಿನ ಏಳು ಎಕರೆಯಲ್ಲಿ ಮೂರು ಅಂತಸ್ತುಗಳ ಕಟ್ಟಡಕ್ಕೆ ಕಾಲೇಜು ಸ್ಥಳಾಂತರಗೊಂಡಿತು. 20 ಸಾವಿರ ಚ.ಮೀ. ವ್ಯಾಪ್ತಿಯ ಕಾಲೇಜಿನ ಕಟ್ಟಡದಲ್ಲಿ ಸದ್ಯ 59 ತರಗತಿ ಕೋಣೆಗಳು, ಆಡಿಯೊ ಹಾಗೂ ವಿಡಿಯೊ ಕೊಠಡಿಗಳು, 35 ಪ್ರಯೋಗಾಲಯಗಳು, ಸುಸಜ್ಜಿತ ಗ್ರಂಥಾಲಯ, ಒಳಕ್ರೀಡಾಂಗಣ, ಹೊರ ಕ್ರೀಡಾಂಗಣ, ಉಪಾಹಾರ ಗೃಹ, ವಿದ್ಯಾರ್ಥಿನಿಯರ ನಿಲಯ ಅಲ್ಲದೆ 600 ಪ್ರೇಕ್ಷಕರು ಕೂಡಬಹುದಾದ ಹವಾನಿಯಂತ್ರಿತ ಸುವರ್ಣ ಸಭಾಂಗಣವಿದೆ.

2001ರಲ್ಲಿ ಪದವಿ ಕಾಲೇಜಿನಿಂದ ಪಿಯು ಕಾಲೇಜು ಪ್ರತ್ಯೇಕಗೊಂಡಿತು. ಸದ್ಯ ಪಿಯು ಕಾಲೇಜಿನಲ್ಲಿ 1,100 ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಪದವಿ ಕಾಲೇಜಿನಲ್ಲಿ 1,600 ವಿದ್ಯಾರ್ಥಿಗಳು, ಸ್ನಾತಕೋತ್ತರ ಪದವಿಯಲ್ಲಿ 900 ವಿದ್ಯಾರ್ಥಿಗಳು ಅಭ್ಯಸಿಸುತ್ತಿದ್ದಾರೆ. ಒಟ್ಟು 3,600 ವಿದ್ಯಾರ್ಥಿಗಳಿಗೆ 200ಕ್ಕೂ ಹೆಚ್ಚು ಅಧ್ಯಾಪಕರು ಹಾಗೂ 60ಕ್ಕೂ ಅಧಿಕ ಅಧ್ಯಾಪಕೇತರ ಸಿಬ್ಬಂದಿ ಇದ್ದಾರೆ.

ಎನ್‌ಸಿಸಿ, ಎನ್‌ಎಸ್‌ಎಸ್, ಉದ್ಯೋಗ ಮಾರ್ಗದರ್ಶನ ಹಾಗೂ ಮಾಹಿತಿ ಕೇಂದ್ರ, ಐಎಎಸ್, ಐಪಿಎಸ್, ಎಫ್‌ಎಸ್ ಸ್ಪರ್ಧಾತ್ಮಕ ಪರೀಕ್ಷೆಗಳ ಮಾರ್ಗದರ್ಶನ ಕೇಂದ್ರ, ಸ್ಕೌಟ್ ಮತ್ತು ಗೈಡ್ಸ್, ಯುವ ರೆಡ್‌ಕ್ರಾಸ್, ರೆಡ್‌ರಿಬ್ಬನ್ ಕ್ಲಬ್, ಗುಂಪು ಅಪಘಾತ ವಿಮೆ ಮೊದಲಾದ ಸೌಲಭ್ಯಗಳು ವಿದ್ಯಾರ್ಥಿಗಳಿಗಿದೆ.

**ರಜತ ಮಹೋತ್ಸವ:** ಈ ಕಾಲೇಜು 1990-91ನೇ ವರ್ಷದಲ್ಲಿ ರಜತ ಮಹೋತ್ಸವ ಆಚರಿಸಿತು. ಬೆಳ್ಳಿಹಬ್ಬದ ಸಮಾರಂಭದಲ್ಲಿ ಕಾಂಗ್ರೆಸ್ ಮುಖಂಡರಾದ ರಾಜೀವ್ ಗಾಂಧಿ, ವಿ.ಪಿ. ಸಿಂಗ್, ಅಗಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ, ಸಚಿವರಾಗಿದ್ದ ಜೆ.ಎಚ್. ಪಟೇಲ್ ಭಾಗವಹಿಸಿದ್ದರು. ಸಮಾರಂಭದಲ್ಲಿ ಸ್ಮರಣ ಸಂಚಿಕೆ 'ರಜತ ದೀಪ್ತಿ' ಬಿಡುಗಡೆಗೊಂಡಿತು.

2001ರಲ್ಲಿ ಕಾಲೇಜು ನ್ಯಾಕ್ (ರಾಷ್ಟ್ರೀಯ ಮೌಲ್ಯಮಾಪನ ಹಾಗೂ ಮೌಲ್ಯಾಂಕನ ಸಮಿತಿ) ಸಮಿತಿಯಿಂದ ಮಾನ್ಯತೆ ಪಡೆಯಿತು. ನಂತರ ಎರಡು ಬಾರಿ ಮೌಲ್ಯಮಾಪನಕ್ಕೆ ಒಳಪಟ್ಟು ನ್ಯಾಕ್ ಸಮಿತಿಯಿಂದ ಎ ಗ್ರೇಡ್ ಮಾನ್ಯತೆ ಗಳಿಸಿತು. ಆಮೇಲೆ ಯುಜಿಸಿಯಿಂದ ಶೈಕ್ಷಣಿಕ ಸ್ವಾಯತ್ತತೆ ಪಡೆಯಿತು. ಯುಜಿಸಿ ಪ್ರಾಯೋಜಕತ್ವದ 'ಬುದ್ಧ ಅಧ್ಯಯನ ಕೇಂದ್ರ' ಇದೆ. ದಕ್ಷತೆವೃದ್ಧಿ ಹಾಗೂ ಜೀವನ ಕೌಶಲ ಅಭಿವೃದ್ಧಿ ಕಾಲೇಜೆಂದು ಯುಜಿಸಿ ಗುರುತಿಸಿದೆ. ರಾಜ್ಯ ಸರ್ಕಾರ ಪ್ರಾಯೋಜಿತ ಜೈವಿಕ ತಂತ್ರಜ್ಞಾನ ಅಳವಡಿಕೆಯ ಕಾಲೇಜಾಗಿದೆ.

ಸದ್ಯ ಪ್ರಾಂಶುಪಾಲ ಮಲ್ಲಿಕಾರ್ಜುನ ಪಂಡಿತ್ ನೇತೃತ್ವದಲ್ಲಿ ಕಾಲೇಜು ಮುನ್ನಡೆಯುತ್ತಿದೆ.

## ವಿದ್ಯಾರ್ಥಿಯಾಗಿ, ಅಧ್ಯಾಪಕರಾಗಿ ಸ್ವಾಮೀಜಿ

ಈ ಕಾಲೇಜಿನ ವಿದ್ಯಾರ್ಥಿಗಳಲ್ಲಿ ಪ್ರಮುಖರಾದವರು ಸುತ್ತೂರು ಮಠದ 24ನೇ ಪೀಠಾಧಿಪತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಸ್ತುತ ಅಧ್ಯಕ್ಷ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ಕೆಲ ಕಾಲ ಕನ್ನಡ ಅಧ್ಯಾಪಕರಾಗಿಯೂ ಸೇವೆ ಸಲ್ಲಿಸಿದರು. ಅವರಲ್ಲದೆ, ಸಚಿವ ಎಚ್.ಎಸ್. ಮಹದೇವ ಪ್ರಸಾದ್, ಕಾಂಗ್ರೆಸ್ ಮುಖಂಡ ಅಡಗೂರು ಎಚ್. ವಿಶ್ವನಾಥ್, ಬಿಜೆಪಿ ಮುಖಂಡ ಎಸ್.ಎ. ರಾಮದಾಸ್, ಲೇಖಕಿ ಡಾ.ಎಂ.ಎಸ್. ವೇದಾ, ಸಂಗೀತ ಕ್ಷೇತ್ರದ ಡಾ.ಮೈಸೂರು ಎಂ. ಮಂಜುನಾಥ್, ಜೈಹೋ ಹಾಡಿನ ಖ್ಯಾತಿಯ ವಿಜಯ ಪ್ರಕಾಶ್... ಹೀಗೆ ಇಲ್ಲಿ ಬೆಳಕಿಗೆ ಬಂದ ಪ್ರತಿಭಾವಂತರ ಪಟ್ಟಿ ಬೆಳೆಯುತ್ತದೆ.

## ಸುವರ್ಣ ಮಹೋತ್ಸವ: ವಿಶೇಷ ಕಾರ್ಯಕ್ರಮಗಳು

ಈ ಬಾರಿಯ ಶೈಕ್ಷಣಿಕ ವರ್ಷದಲ್ಲಿ ಕಾಲೇಜಿನ ಸುವರ್ಣ ಮಹೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲು ಕಾಲೇಜು ಸಿದ್ಧಗೊಳ್ಳುತ್ತಿದೆ. ಅವುಗಳಲ್ಲಿ ಸ್ಮರಣ ಸಂಚಿಕೆ ಪ್ರಕಟಣೆ, ವಿಶೇಷ ಉಪನ್ಯಾಸ ಮಾಲೆ, ರಾಜ್ಯಮಟ್ಟದ ವಿಜ್ಞಾನ ವಸ್ತುಪ್ರದರ್ಶನ ಮತ್ತು ಸ್ಪರ್ಧೆ, ರಾಷ್ಟ್ರಮಟ್ಟದ ವಿಚಾರಸಂಕಿರಣ ಹಾಗೂ ಕಾರ್ಯಾಗಾರ, ದತ್ತಿಗಳ ಸ್ಥಾಪನೆ, ಸಾಕ್ಷ್ಯಚಿತ್ರ ನಿರ್ಮಾಣ, ಹಿರಿಯ ವಿದ್ಯಾರ್ಥಿಗಳ ಸಮಾವೇಶ, ನಿವೃತ್ತ ಹಾಗೂ ವರ್ಗಾವಣೆಗೊಂಡ ನೌಕರರ ಸಮಾವೇಶ ಪ್ರಮುಖವಾದವು.



ಕಾಲೇಜಿನಲ್ಲಿ 1969ರಲ್ಲಿ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಗ್ರಂಥಾಲಯವನ್ನು ಉದ್ಘಾಟಿಸಿದ ಕ್ಷಣ..



ಕಾಲೇಜಿಗೆ ಭೇಟಿ ನೀಡಿದ್ದ ಅಂದಿನ ಪ್ರಧಾನಿ ರಾಜೀವ್ ಗಾಂಧಿ ಅವರೊಡನೆ ಚರ್ಚೆಯಲ್ಲಿ ತೊಡಗಿರುವ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ




ಕಾಲೇಜಿನ ಸುವರ್ಣಮಹೋತ್ಸವ ಭವನವನ್ನು ಮಾಜಿ ರಾಷ್ಟ್ರಪತಿ ಎಪಿಜೆ ಅಬ್ದುಲ್ ಕಲಾಂ ಅವರು ಉದ್ಘಾಟಿಸಿದ ಕ್ಷಣ, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಇದ್ದಾರೆ

## 60ಕ್ಕೂ ಅಧಿಕ ಕೋರ್ಸ್

ಪ್ರಸ್ತುತ 10 ಸ್ನಾತಕೋತ್ತರ ಕೇಂದ್ರಗಳು ಇಲ್ಲಿದ್ದು, ಎಂಸಿಎ ಸ್ನಾತಕೋತ್ತರ ತರಗತಿ ಆರಂಭಿಸಲು ವಿವಿಯ ಅನುಮತಿ ಪಡೆಯಲಾಗಿದೆ. ಈ ವರ್ಷದ ಶೈಕ್ಷಣಿಕ ವರ್ಷದಲ್ಲಿ ಬಿ- ವೋಕ್ ಪದವಿ ಕೋರ್ಸ್ ಹಾಗೂ ಕಾಲೇಜಿನ ಸಮುದಾಯ ಅಭಿವೃದ್ಧಿ ಯೋಜನೆಯಡಿ ಡಿಪ್ಲೊಮಾ ಕೋರ್ಸ್ ಆರಂಭಿಸಲಾಗಿದೆ. ಸದ್ಯ ಪದವಿ ವಿಭಾಗದಲ್ಲಿ 23 ಸಂಯೋಜನೆಯ 6 ಕೋರ್ಸ್, ಸ್ನಾತಕೋತ್ತರ ಪದವಿಯಲ್ಲಿ 10 ಪ್ರೋಗ್ರಾಂ, 4 ವಿಷಯಗಳಲ್ಲಿ ಪಿಎಚ್.ಡಿ ಪ್ರೋಗ್ರಾಂ, 7 ಪಿಜಿ ಡಿಪ್ಲೊಮಾ, ಆ್ಯಡ್‌ಆನ್ ಕೋರ್ಸ್‌ಗಳ 11 ಸರ್ಟಿಫಿಕೇಟ್, 10 ಡಿಪ್ಲೊಮಾ ಹಾಗೂ ಇತರೆ ಕೋರ್ಸುಗಳ ಸೇರಿ ಒಟ್ಟು 60ಕ್ಕೂ ಹೆಚ್ಚು ಕೋರ್ಸುಗಳು ಇಲ್ಲಿವೆ.

ಮೈಸೂರು ಮಿತ್ರ ದಿನಪತ್ರಿಕೆ 06-04-2015

# ಏ. ೮, ಜೆಎಸ್‌ಎಸ್ ಕಲಾ, ವಾಣಿಜ್ಯ, ವಿಜ್ಞಾನ ಕಾಲೇಜಿನ ಸುವರ್ಣ ಮಹೋತ್ಸವ

## ಮುಖ್ಯಮಂತ್ರಿಗಳಿಂದ ಸ್ನಾತಕೋತ್ತರ ಕೇಂದ್ರದ ಮೂರನೇ ಮಹಡಿ ಉದ್ಘಾಟನೆ

ಮೈಸೂರು, ಏ. ೫ (ಎಂಟಿವೈ)– ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಸುವರ್ಣ ಮಹೋತ್ಸವ ಏ.೮ರಂದು ಬೆಳಿಗ್ಗೆ ೧೦.೩೦ಕ್ಕೆ ನಡೆಯಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ನಾತಕೋತ್ತರ ಕೇಂದ್ರದ ಮೂರನೇ ಮಹಡಿಯನ್ನು ಉದ್ಘಾಟಿಸಲಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಜೆಎಸ್‌ಎಸ್ ಮಹಾ ವಿದ್ಯಾಪೀಠದ ಕಾರ್ಯದರ್ಶಿ ಎಸ್.ಪಿ. ಮಂಜುನಾಥ್‌ರವರು ಈ ವಿಷಯ ತಿಳಿಸಿದರು.

ಸುತ್ತೂರು ಸಂಸ್ಥಾನದ ಡಾ. ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ೧೯೬೪ರಲ್ಲಿ ಸ್ಥಾಪಿಸಿದ ಈ ಕಾಲೇಜಿನಲ್ಲಿ ಕೇವಲ ೫೨ ವಿದ್ಯಾರ್ಥಿಗಳು, ೧೧ ಮಂದಿ ಸಿಬ್ಬಂದಿಗಳಿದ್ದರು. ಆದರೆ ಇಂದು ಸುವರ್ಣ ಮಹೋತ್ಸವದ ಸಂಭ್ರಮದಲ್ಲಿರುವ ಕಾಲೇಜಿನಲ್ಲಿ ಪಿಯುಸಿ, ಪದವಿ, ಸ್ನಾತಕೋತ್ತರ ವಿಭಾಗಗಳಿಂದ ೩೬೦೦ಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ೧೬೦ ಬೋಧಕರು, ೭೦ ಮಂದಿ ಬೋಧಕೇತರ ಸಿಬ್ಬಂದಿಯನ್ನು ಹೊಂದಿದೆ ಎಂದು ಅವರು ವಿವರಿಸಿದರು.

ಏ.೮ರಂದು ಬೆಳಿಗ್ಗೆ ೧೦.೩೦ಕ್ಕೆ ಕಾಲೇಜಿನಲ್ಲಿ ಆವರಣದಲ್ಲಿ ನಡೆಯುವ ಸುವರ್ಣ ಮಹೋತ್ಸವ ಸಮಾರಂಭವನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸುವರ್ಣ ಮಹೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ, ಸ್ನಾತ ಕೋತ್ತರ ಕೇಂದ್ರದ ಮೂರನೇ ಮಹಡಿಯನ್ನು ಸಮರ್ಪಿಸಲಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವರಾದ ವಿ. ಶ್ರೀನಿವಾಸ್ ಪ್ರಸಾದ್ ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಸಹಕಾರ ಸಚಿವ ಹೆಚ್.ಎಸ್. ಮಹಾದೇವಪ್ರಸಾದ್ ಅವರು ಮಹಿಳಾ ವಿದ್ಯಾರ್ಥಿನಿಲಯದ ಮೊದಲ ಹಾಗೂ ಎರಡನೇ ಮಹಡಿಯ ಕಟ್ಟಡ ವನ್ನು ಉದ್ಘಾಟಿಸಲಿದ್ದಾರೆ. ಲೋಕೋಪಯೋಗಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅನಿಮೇಷನ್ ಪ್ರಯೋಗಾಲಯವನ್ನು ಉದ್ಘಾಟಿಸಲಿದ್ದಾರೆ. ಸಂಸದ ಪ್ರತಾಪ್‌ಸಿಂಹ ವ್ಯಾಯಾಮಶಾಲೆ ಮತ್ತು ಒಳಕ್ರೀಡಾಂಗಣ ವನ್ನು ಉದ್ಘಾಟಿಸಲಿದ್ದಾರೆ. ಶಾಸಕ ಎಂ.ಕೆ. ಸೋಮಶೇಖರ್ ಕೌಶಲ್ಯಾಧಾರಿತ ಉನ್ನತ ಶಿಕ್ಷಣದ ವೆಬ್‌ಸೈಟ್ ಬಿಡುಗಡೆ ಮಾಡಿದರೆ, ಮೇಯರ್ ಆರ್. ಲಿಂಗಪ್ಪ, ಮಾಜಿ ಸಂಸದ ಹೆಚ್. ವಿಶ್ವನಾಥ್ ಅವರು ಅಡ್ವಾನ್ಸ್‌ಡ್ ಡಿಪ್ಲೊಮಾ ಕೋರ್ಸ್ ಪರಿಚಯ ಪತ್ರ ಬಿಡುಗಡೆ ಮಾಡಲಿದ್ದಾರೆ ಎಂದು ಅವರು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಪ್ರಾಂಶುಪಾಲ ಎಂ.ಬಿ. ಮಲ್ಲಿಕಾರ್ಜುನ ಪಂಡಿತ್, ಸಾಂಬಶಿವಯ್ಯ, ಸೋಮಶೇಖರ್, ಸದಾಶಿವಮೂರ್ತಿ ಇದ್ದರು.

ಸಂಯುಕ್ತ ಕರ್ನಾಟಕ ದಿನಪತ್ರಿಕೆ 06-04-2015

# ಜೆಎಸ್‌ಎಸ್ ಪದವಿ ಕಾಲೇಜಿಗೆ ಸುವರ್ಣ ಸಂಭ್ರಮ


## 8 ರಂದು ಮುಖ್ಯಮಂತ್ರಿ ಸಿದ್ಧರಾಮಯ್ಯ, ಸಚಿವರಿಂದ ಹಲವು ಕಾರ್ಯಕ್ರಮಗಳಿಗೆ ಚಾಲನೆ

ಮೈಸೂರು

ನಗರದ ಪ್ರತಿಷ್ಠಿತ ವಿದ್ಯಾ ಸಂಸ್ಥೆಗಳಲ್ಲಿ ಒಂದಾಗಿರುವ ಜೆಎಸ್‌ಎಸ್ ಮಹಾವಿದ್ಯಾಪೀಠದ ಆಶ್ರಯದಲ್ಲಿ ನಡೆಯುತ್ತಿರುವ ಊಟಿ ರಸ್ತೆಯ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಸುವರ್ಣ ಮಹೋತ್ಸವ ಸಂಭ್ರಮದಲ್ಲಿದ್ದು, ವರ್ಷಪೂರ್ತಿ ಕಾರ್ಯಕ್ರಮಗಳನ್ನು ಆಯೋಜಿಸಿದೆ.

ಸುದ್ದಿಗೋಷ್ಠಿಯಲ್ಲಿ ಜೆಎಸ್‌ಎಸ್ ವಿದ್ಯಾಪೀಠದ ಕಾರ್ಯದರ್ಶಿ ಎಸ್.ಪಿ.ಮಂಜುನಾಥ್ ಮಾತನಾಡಿ, ಏ.8 ರಂದು ಬೆಳಗ್ಗೆ 10.30ಕ್ಕೆ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಉಪಸ್ಥಿತಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸುವರ್ಣ ಮಹೋತ್ಸವ ಹಾಗೂ ಸ್ನಾತಕೋತ್ತರ ಕೇಂದ್ರದ ಮೂರನೇ ಮಹಡಿಯನ್ನು ಉದ್ಘಾಟಿಸಲಿದ್ದಾರೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ವಿ.ಶ್ರೀನಿವಾಸಪ್ರಸಾದ್ ಅಧ್ಯಕ್ಷತೆ ವಹಿಸಲಿದ್ದು, ಸಹಕಾರ ಮತ್ತು ಸಕ್ಕರೆ ಸಚಿವ ಎಚ್.ಎಸ್.ಮಹದೇವಪ್ರಸಾದ್ ಅವರು ಮಹಿಳಾ ವಿದ್ಯಾರ್ಥಿನಿಲಯದ ಮೊದಲ ಮತ್ತು ಎರಡನೇ ಮಹಡಿಯನ್ನು ಉದ್ಘಾಟಿಸುವರು. ಲೋಕೋಪಯೋಗಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರು ಅನಿಮೇಷನ್ ಪ್ರಯೋಗಾಲಯ ಮತ್ತು ಸಂಸದ ಪ್ರತಾಪಸಿಂಹ ಅವರು ವ್ಯಾಯಾಮ ಶಾಲೆ ಮತ್ತು ಒಳಾಂಗಣ ಕ್ರೀಡಾಂಗಣವನ್ನು ಉದ್ಘಾಟಿಸುವರು ಎಂದು ತಿಳಿಸಿದರು.



ಕೌಶಲಾಧಾರಿತ ಕೋರ್ಸ್‌ಗಳ ವೆಬ್‌ಸೈಟನ್ನು ಶಾಸಕ ಎಂ.ಕೆ.ಸೋಮಶೇಖರ್ ಅನಾವರಣ ಮಾಡಲಿದ್ದು, ಮಹಾಪೌರ ಆರ್.ಲಿಂಗಪ್ಪ ಅವರು ಕೌಶಲಾಧಾರಿತ ಪದವಿ ಕೋರ್ಸ್‌ಗಳ ಪರಿಚಯಪತ್ರವನ್ನು, ಮಾಜಿ ಸಂಸದ ಅಡಗೂರು ಎಚ್ ವಿಶ್ವನಾಥ್ ಅವರು ಅಡ್ವಾನ್ಸ್ಡ್ ಡಿಪ್ಲೊಮಾ ಕೋರ್ಸ್‌ಗಳ ಪರಿಚಯಪತ್ರಗಳನ್ನು ಲೋಕಾರ್ಪಣೆ ಮಾಡುವರು ಎಂದರು.

ಸುವರ್ಣ ಮಹೋತ್ಸವದ ಅಂಗವಾಗಿ ಒಂದು ವರ್ಷ ವಿಶೇಷ ಉಪನ್ಯಾಸಮಾಲೆ, ಸಂಸ್ಮರಣ ಗ್ರಂಥ, ವಿಜ್ಞಾನ ವಸ್ತುಪ್ರದರ್ಶನ ಮತ್ತು ಸ್ಪರ್ಧೆ, ವಿಚಾರ ಸಂಕಿರಣ ಮತ್ತು ಕಾರ್ಯಾಗಾರಗಳನ್ನು ವ್ಯವಸ್ಥೆ ಮಾಡಲಾಗಿದೆ ಎಂದ ಅವರು, ಹಿರಿಯ ವಿದ್ಯಾರ್ಥಿಗಳ ಸಮಾವೇಶ, ಸಾಂಸ್ಕೃತಿಕ ಸ್ಪರ್ಧೆ, ನಿವೃತ್ತರಾದ ಹಾಗೂ ವರ್ಗಾವಣೆಗೊಂಡಿರುವ ನೌಕರರ ಸಮಾವೇಶ, ದತ್ತಿಗಳ ಸ್ಥಾಪನೆ ಇತ್ಯಾದಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದರು.

ಪ್ರೊ.ಸದಾಶಿವಮೂರ್ತಿ, ಪದವಿ ಕಾಲೇಜು ಪ್ರಾಂಶುಪಾಲ ಪ್ರೊ. ಎಂ.ಬಿ.ಮಲ್ಲಿಕಾರ್ಜುನ ಪಂಡಿತ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪ್ರಾಂಶುಪಾಲ ಸೋಮಶೇಖರಮೂರ್ತಿ ಸಾಂಬಶಿವಯ್ಯ,ಪದವಿಪೂರ್ವಕಾಲೇಜು ಇದ್ದರು.

### ನ್ಯಾಕ್ 'ಎ' ಗ್ರೇಡ್ ಮಾನ್ಯತೆ



ಸುತ್ತೂರು ಶ್ರೀಮಠದ 23ನೇ ಪೀಠಾಧಿಪತಿಗಳಾಗಿದ್ದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ದೂರದರ್ಶಿತ್ವದ ಫಲವಾಗಿ ರಾಮಾನುಜ ರಸ್ತೆಯಲ್ಲಿರುವ ಅನೆಕರೋಟಿ ಆವರಣದಲ್ಲಿ 1964ರಲ್ಲಿ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಪ್ರಾರಂಭವಾಯಿತು.

ಕೇವಲ 52 ವಿದ್ಯಾರ್ಥಿಗಳು, 11 ಸಿಬ್ಬಂದಿ ವರ್ಗದವರಿಂದ ಪ್ರಾರಂಭವಾದ ಕಾಲೇಜಿನಲ್ಲಿ ಇಂದು 3600ಕ್ಕೂ ಹೆಚ್ಚು ವಿದ್ಯಾರ್ಥಿಗಳು, 190 ಬೋಧಕರು ಹಾಗೂ 70 ಮಂದಿ ಬೋಧಕೇತರರಿದ್ದಾರೆ.

1990ರಲ್ಲಿ ನಡೆದ ರಜತಮಹೋತ್ಸವ ಕಾರ್ಯಕ್ರಮವನ್ನು ಮಾಜಿ ಪ್ರಧಾನಿ ರಾಜೀವ್‌ಗಾಂಧಿ ಉದ್ಘಾಟಿಸಿದರೆ, 1991ರಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ಮಾಜಿ ಪ್ರಧಾನಿ ವಿ.ಪಿ.ಸಿಂಗ್ ಸಮಾರೋಪ ಭಾಷಣ ಮಾಡಿದರು. 1993ರಲ್ಲಿ ಊಟಿ ರಸ್ತೆಯಲ್ಲಿರುವ ಏಳು ಎಕರೆ ಪ್ರದೇಶದಲ್ಲಿ ನಿರ್ಮಿಸಲಾದ ಹೊಸ ಕಟ್ಟಡಕ್ಕೆ ಕಾಲೇಜನ್ನು ಸ್ಥಳಾಂತರಿಸಲಾಯಿತು. ಕಟ್ಟಡವನ್ನು ಅಂದಿನ ರಾಷ್ಟ್ರಪತಿ ಡಾ.ಶಂಕರದಯಾಳ ಶರ್ಮ ಅವರು ಉದ್ಘಾಟಿಸಿದರು. 2013 ರಲ್ಲಿ ಅಂದಿನ ರಾಷ್ಟ್ರಪತಿ ಡಾ.ಎಪಿಜೆ ಅಬ್ದುಲ್ ಕಲಾಂ ಅವರು ಸುವರ್ಣ ಮಹೋತ್ಸವ ಭವನವನ್ನು ಉದ್ಘಾಟಿಸಿದರು.

ಈಗ ಮೈಸೂರು ವಿವಿಯಿಂದ ಸ್ವಾಯತ್ತತೆ ಪಡೆದಿರುವ ಕಾಲೇಜಿಗೆ ನ್ಯಾಕ್ 'ಎ' ಗ್ರೇಡ್ ಮಾನ್ಯತೆ ನೀಡಿದ್ದು, ಮೈಸೂರು ವಿವಿಯಿಂದ ಉತ್ಕೃಷ್ಟತಾ ಅಂತಸ್ಸಾಮರ್ಥ್ಯವುಳ್ಳ ಕಾಲೇಜೆಂದು ಪರಿಗಣಿತವಾಗಿದೆ.

INDIAN EXPRESS 06-04-2015

# CM to Inaugurate JSS College Golden Jubilee

Express News Service

Pandit said the college is re-accredited by NAAC with A Grade

**Mysuru:** The golden jubilee celebrations of JSS College of Arts, Commerce and Science will be held on Wednesday, said college secretary Manjunath on Sunday.

He told reporters that the celebrations will be inaugurated by Chief Minister Siddaramaiah and presided over by Revenue Minister Srinivas Prasad. Cooperation Minister H S Mahadeva Prasad, PWD Minister H C Mahadevappa, MP Pratap Simha, MLA M K Somashekar and mayor R Lingappa will be present.

Principal M B Mallikharjuna Pandit said the college was started on Anekaroti premises at Ramanuja Road in 1964 by the 24th pontiff of Suttur Mutt Sri Shivaratri Rajendra Mahaswamy.

The college started with 52 students and 11 staff. Currently, it has 600 students and 190 teaching and 70 non-teaching staff. It has PU, degree and PG courses.

In 1990-91, the college celebrated its silver jubilee.

In 1993, the college was shifted to a new building constructed on a seven-acre plot on Ooty Road.

Pandit said the college is re-accredited by NAAC with A Grade.

The college is recognised by the UGC as a College with Potential for Excellence. The Department of Biotechnology has identified it for support under the Star College Scheme. It is running Biotechnology Finishing School sanctioned by the state government. The college has been functioning as an autonomous institution from the academic year 2005-06. Nearly 2,492 students, including foreign students, are pursuing education in various disciplines.

## Inauguration

The CM will inaugurate the PG centre building, Prasad will inaugurate women's hostel, Mahadevappa will inaugurate animation centre, Pratap Simha will inaugurate gymnasium and indoor stadium and MLA M K Somashekar will inaugurate the technical course website.

To mark the golden jubilee celebration, lectures, science exhibition and competitions, seminars and workshops will be organised throughout the year.

TIMES OF INDIA 06-04-2015

# Govt will ensure quality education to all: CM

TIMES NEWS NETWORK





**GRAND OCCASION:** Students of JSS College of Arts, Commerce and Science at the golden jubilee celebrations of their institute on Wednesday. Chief minister Siddaramaiah inaugurated the programme

**Mysuru:** Chief minister Siddaramaiah on Wednesday said that the state government will focus on imparting skill-based and quality education.

Inaugurating the golden jubilee celebrations of JSS College of Arts, Commerce and Science, he said that learning to read and write is not education. "It should contribute to the overall development of an individual. Only skill-based education will ensure prosperity in life. No one should be deprived of quality education. We will strive to ensure this," he said.

"Youngsters have a feeling that only professional courses will give them good career options. We want to change this mindset. Education should help a student become a good human being and responsible citizen," the CM added, advising students to work hard.

He also used the opportunity to sensitize students against unscientific rituals and practices. "Even the media is promoting such practices. Do not pay heed to them. How we live and what we give to society is what counts," he said.

The CM also lauded JSS Mahavidya Peeta. "Suttur Mutt has a long history in the field. JSS Institutions is Mysuru's pride," he said.


Earlier, co-operation minister H S Mahadev Prasad, an alumnus of the college, recalled his days in the institution. Revenue minister V Srinivas Prasad asked students to actively participate in extra-curricular activities.

ಆಂದೋಲನ ದಿನಪತ್ರಿಕೆ 06-04-2015

# ಜೆಎಸ್‌ಎಸ್ ಪದವಿ ಕಾಲೇಜಿಗೆ ಸುವರ್ಣ ಸಂಭ್ರಮ

- ಏ.೮ರಂದು ಮುಖ್ಯಮಂತ್ರಿಗಳಿಂದ ಕಾರ್ಯಕ್ರಮಕ್ಕೆ ಚಾಲನೆ
- ವರ್ಷವಿಡೀ ಉಪನ್ಯಾಸ, ವಿಚಾರಸಂಕಿರಣ, ಕಾರ್ಯಾಗಾರ





ಮೈಸೂರು,ಏ.೫–ನಗರದ ಪ್ರತಿಷ್ಠಿತ ವಿದ್ಯಾಸಂಸ್ಥೆಗಳಲ್ಲಿ ಒಂದಾದ ಜೆಎಸ್‌ಎಸ್ ಮಹಾವಿದ್ಯಾಪೀಠದ ಆಶ್ರಯದಲ್ಲಿ ನಡೆಯುತ್ತಿರುವ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಸುವರ್ಣ ಮಹೋತ್ಸವ ಸಂಭ್ರಮದಲ್ಲಿದ್ದು, ವರ್ಷವಿಡೀ ಕಾರ್ಯಕ್ರಮಗಳನ್ನು ಆಯೋಜಿಸಿದೆ.

ನಗರದ ಪತ್ರಕರ್ತರ ಭವನದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜೆಎಸ್‌ಎಸ್ ವಿದ್ಯಾಪೀಠದ ಕಾರ್ಯದರ್ಶಿ ಎಸ್.ಪಿ.ಮಂಜುನಾಥ್ ಅವರು, ಈ ವಿಷಯ ತಿಳಿಸಿದರಲ್ಲದೆ, ಏಪ್ರಿಲ್ ೮ರಂದು ಬೆಳಿಗ್ಗೆ ೧೦.೩೦ಕ್ಕೆ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಉಪಸ್ಥಿತಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸುವರ್ಣ ಮಹೋತ್ಸವ ಹಾಗೂ ಸ್ನಾತಕೋತ್ತರ ಕೇಂದ್ರದ ಮೂರನೇ ಮಹಡಿಯನ್ನು ಉದ್ಘಾಟಿಸುವರು ಎಂದರು.

ಕಂದಾಯ ಸಚಿವರೂ ಆದ ಜಿಲ್ಲಾ ಉಸ್ತುವಾರಿ ಸಚಿವ ವಿ.ಶ್ರೀನಿವಾಸಪ್ರಸಾದ್ ಅವರು ಅಧ್ಯಕ್ಷತೆ ವಹಿಸಲಿದ್ದು, ಸಹಕಾರ ಮತ್ತು ಸಕ್ಕರೆ ಸಚಿವರೂ ಆದ ಹೆಚ್.ಎಸ್.ಮಹದೇವ ಪ್ರಸಾದ್ ಅವರು, ಮಹಿಳಾ ವಿದ್ಯಾರ್ಥಿನಿಲಯದ ಮೊದಲ ಮತ್ತು ಎರಡನೆಯ ಮಹಡಿಯನ್ನು ಉದ್ಘಾಟಿಸುವರು. ಲೋಕೋಪಯೋಗಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಆ್ಯನಿಮೇಷನ್ ಪ್ರಯೋಗಾಲಯವನ್ನು, ಲೋಕಸಭಾ ಸದಸ್ಯ ಪ್ರತಾಪಸಿಂಹ ಅವರು ವ್ಯಾಯಾಮ ಶಾಲೆ ಮತ್ತು ಒಳಾಂಗಣ ಕ್ರೀಡಾಂಗಣವನ್ನು ಉದ್ಘಾಟಿಸುವರು ಎಂದು ಹೇಳಿದರು.

ವಿಧಾನಸಭಾ ಸದಸ್ಯರಾದ ಎಂ.ಕೆ.ಸೋಮಶೇಖರ್ ಅವರು ಕೌಶಲ್ಯಾಧಾರಿತ ಕೋರ್ಸ್‌ಗಳ ವೆಬ್‌ಸೈಟನ್ನು ಅನಾವರಣ ಮಾಡಲಿದ್ದು, ಮಹಾಪೌರರಾದ ಆರ್.ಲಿಂಗಪ್ಪ ಅವರು ಕೌಶಲ್ಯಾಧಾರಿತ ಪದವಿ ಕೋರ್ಸ್‌ಗಳ ಪರಿಚಯ ಪತ್ರವನ್ನು, ಮಾಜಿ ಸಚಿವ ಅಡಗೂರು ಹೆಚ್ ವಿಶ್ವನಾಥ್ ಅವರು ಅಡ್ವಾನ್ಸ್‌ಡ ಡಿಪ್ಲೊಮಾ ಕೋರ್ಸ್‌ಗಳ ಪರಿಚಯ ಪತ್ರಗಳನ್ನು ಲೋಕಾರ್ಪಣೆ ಮಾಡುವರು ಎಂದು ತಿಳಿಸಿದರು.

ಸುವರ್ಣ ಮಹೋತ್ಸವದ ಅಂಗವಾಗಿ ಒಂದು ವರ್ಷ ವಿಶೇಷ ಉಪನ್ಯಾಸಮಾಲೆ, ಸಂಸ್ಮರಣ ಗ್ರಂಥ, ವಿಜ್ಞಾನ ವಸ್ತುಪ್ರದರ್ಶನ ಮತ್ತು ಸ್ಪರ್ಧೆ, ವಿಚಾರ ಸಂಕಿರಣ ಮತ್ತು ಕಾರ್ಯಾಗಾರಗಳನ್ನು ವ್ಯವಸ್ಥೆ ಮಾಡಲಾಗಿದೆ ಎಂದು ಮಂಜುನಾಥ್ ತಿಳಿಸಿದರಲ್ಲದೆ, ಹಿರಿಯ ವಿದ್ಯಾರ್ಥಿಗಳ ಸಮಾವೇಶ, ಸಾಂಸ್ಕೃತಿಕ ಸ್ಪರ್ಧೆ, ನಿವೃತ್ತರಾದ ಹಾಗೂ ವರ್ಗಾವಣೆಗೊಂಡಿರುವ ನೌಕರರ ಸಮಾವೇಶ, ದತ್ತಿಗಳ ಸ್ಥಾಪನೆ ಇತ್ಯಾದಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದರು.


ಪ್ರೊ.ಸದಾಶಿವಮೂರ್ತಿ, ಪದವಿ ಕಾಲೇಜು ಪ್ರಾಂಶುಪಾಲ ಪ್ರೊ.ಎಂ.ಬಿ.ಮಲ್ಲಿಕಾರ್ಜುನ ಪಂಡಿತ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪ್ರೊ.ಸಾಂಬಶಿವಯ್ಯ, ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಪ್ರೊ.ಸೋಮಶೇಖರ ಮೂರ್ತಿ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

**೧೯೯೦ರಲ್ಲಿ ನಡೆದ ರಜತಮಹೋತ್ಸವ ಕಾರ್ಯಕ್ರಮವನ್ನು ಮಾಜಿ ಪ್ರಧಾನಿ ರಾಜೀವ್ ಗಾಂಧಿ ಉದ್ಘಾಟಿಸಿದರೆ, ೧೯೯೧ರಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ಮಾಜಿ ಪ್ರಧಾನಿ ವಿ.ಪಿ.ಸಿಂಗ್ ಸಮಾರೋಪ ಭಾಷಣ ಮಾಡಿದ್ದರು. ೧೯೯೩ರಲ್ಲಿ ಊಟಿ ರಸ್ತೆಯಲ್ಲಿರುವ ಏಳು ಎಕರೆ ಪ್ರದೇಶದಲ್ಲಿ ನಿರ್ಮಿಸಲಾದ ಹೊಸ ಕಟ್ಟಡಕ್ಕೆ ಕಾಲೇಜನ್ನು ಸ್ಥಳಾಂತರಿಸಲಾಯಿತು. ಕಟ್ಟಡವನ್ನು ಅಂದಿನ ರಾಷ್ಟ್ರಪತಿ ಡಾ.ಶಂಕರದಯಾಳ ಶರ್ಮ ಅವರು ಉದ್ಘಾಟಿಸಿದರು. ೨೦೧೩ರಲ್ಲಿ ಅಂದಿನ ರಾಷ್ಟ್ರಪತಿ ಡಾ.ಎಪಿಜೆ ಅಬ್ದುಲ್ ಕಲಾಂ ಅವರು ಸುವರ್ಣ ಮಹೋತ್ಸವ ಭವನವನ್ನು ಉದ್ಘಾಟಿಸಿದರು.**

**ಕಾಲೇಜಿನ ಸಂಕ್ಷಿಪ್ತ ಪರಿಚಯ:** ಸುತ್ತೂರು ಶ್ರೀಮಠದ ೨೩ನೇ ಪೀಠಾಧಿಪತಿಗಳಾಗಿದ್ದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ದೂರದರ್ಶಿತ್ವದ ಫಲವಾಗಿ ರಾಮಾನುಜ ರಸ್ತೆಯಲ್ಲಿರುವ ಆನೆಕರೋಟಿ ಆವರಣದಲ್ಲಿ ೧೯೬೪ರಲ್ಲಿ ಕಾಲೇಜು ಪ್ರಾರಂಭವಾಯಿತು. ಕೇವಲ ೫೨ ವಿದ್ಯಾರ್ಥಿಗಳು, ೧೧ ಸಿಬ್ಬಂದಿ ವರ್ಗದವರಿಂದ ಪ್ರಾರಂಭವಾದ ಕಾಲೇಜಿನಲ್ಲಿ ಇಂದು ೩೬೦೦ಕ್ಕೂ ಹೆಚ್ಚು ವಿದ್ಯಾರ್ಥಿಗಳು, ೧೯೦ ಬೋಧಕರು ಹಾಗೂ ೭೦ ಮಂದಿ ಬೋಧಕೇತರರಿದ್ದಾರೆ.

ಈಗ ಮೈಸೂರು ವಿವಿಯಿಂದ ಸ್ವಾಯತ್ತತೆ ಪಡೆದಿರುವ ಕಾಲೇಜಿಗೆ ನ್ಯಾಕ್ 'ಎ' ಗ್ರೇಡ್ ಮಾನ್ಯತೆ ನೀಡಿದ್ದು, ಮೈಸೂರು ವಿವಿಯಿಂದ ಉತ್ಕೃಷ್ಟತಾ ಅಂತಸ್ಸಾಮರ್ಥ್ಯವುಳ್ಳ ಕಾಲೇಜೆಂದು ಪರಿಗಣಿತವಾಗಿದೆ.

ಆಂದೋಲನ ದಿನಪತ್ರಿಕೆ - 08-04-2015



## ಇಂದು ಸುವರ್ಣ ಸಂಭ್ರಮಕ್ಕೆ ಚಾಲನೆ

ಮೈಸೂರು: ಬುಧವಾರ (ಏ.೮) ಬೆಳಿಗ್ಗೆ ೧೦.೩೦ಕ್ಕೆ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಉಪಸ್ಥಿತಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜೆಎಸ್‌ಎಸ್ ಕಾಲೇಜಿನ ಸುವರ್ಣ ಮಹೋತ್ಸವ ಮತ್ತು ಸ್ನಾತಕೋತ್ತರ ಕೇಂದ್ರದ ಮೂರನೆಯ ಮಹಡಿಯನ್ನು ಉದ್ಘಾಟಿಸಲಿದ್ದು, ಕಂದಾಯ ಮತ್ತು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ವಿ.ಶ್ರೀನಿವಾಸ ಪ್ರಸಾದ್ ಅವರು ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ.

ಸಹಕಾರ ಮತ್ತು ಸಕ್ಕರೆ ಸಚಿವ ಹೆಚ್.ಎಸ್.ಮಹದೇವಪ್ರಸಾದ್ ಅವರು ಮಹಿಳಾ ವಿದ್ಯಾರ್ಥಿನಿಲಯದ ಮೊದಲನೆಯ ಮತ್ತು ಎರಡನೆಯ ಮಹಡಿಯನ್ನು, ಲೋಕೋಪಯೋಗಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಆ್ಯನಿಮೇಷನ್ ಪ್ರಯೋಗಾಲಯವನ್ನು ಹಾಗೂ ಲೋಕಸಭಾ ಸದಸ್ಯ ಪ್ರತಾಪ ಸಿಂಹ ಅವರು ವ್ಯಾಯಾಮಶಾಲೆ ಮತ್ತು ಒಳಕ್ರೀಡಾಂಗಣವನ್ನು ಉದ್ಘಾಟಿಸಲಿದ್ದಾರೆ.

ವಿಧಾನಸಭಾ ಸದಸ್ಯ ಎಂ.ಕೆ.ಸೋಮಶೇಖರ್ ಕೌಶಲ್ಯಾಧಾರಿತ ಕೋರ್ಸ್‌ಗಳ ವೆಬ್‌ಸೈಟನ್ನು, ಮಹಾಪೌರರಾದ ಆರ್.ಲಿಂಗಪ್ಪ ಅವರು ಕೌಶಲ್ಯಾಧಾರಿತ ಪದವಿ ಕೋರ್ಸ್‌ಗಳ ಪರಿಚಯಪತ್ರವನ್ನು ಹಾಗೂ ಮಾಜಿ ಸಂಸದ ಅಡಗೂರು ಹೆಚ್.ವಿಶ್ವನಾಥ್ ಅವರು ಕಮ್ಯೂನಿಟಿ ಕಾಲೇಜು ಹಾಗೂ ಅಡ್ವಾನ್ಸ್ಡ್ ಡಿಪ್ಲೊಮಾ ಕೋರ್ಸ್‌ಗಳ ಪರಿಚಯ ಪತ್ರಗಳನ್ನು ಬಿಡುಗಡೆ ಮಾಡಲಿದ್ದಾರೆ.

# ಜೆಎಸ್‌ಎಸ್ ಪದವಿ ಕಾಲೇಜಿಗೆ ಸುವರ್ಣ ಸಂಭ್ರಮ

## ೧೯೬೪ರಲ್ಲಿ ೫೨ ವಿದ್ಯಾರ್ಥಿಗಳಿಂದ ಆರಂಭವಾದ ಕಾಲೇಜಿನಲ್ಲೀಗ ೩,೬೦೦ ವಿದ್ಯಾರ್ಥಿಗಳಿಗೆ ಬೋಧನೆ

ಮೈಸೂರು,ಏ.೭- ನಗರದ ಪ್ರತಿಷ್ಠಿತ ವಿದ್ಯಾಸಂಸ್ಥೆಗಳಲ್ಲಿ ಒಂದಾದ ಜೆಎಸ್‌ಎಸ್ ಮಹಾವಿದ್ಯಾಪೀಠದ ಆಶ್ರಯದಲ್ಲಿ ನಡೆಯುತ್ತಿರುವ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಸಾರ್ಥಕ ೫೦ ವರ್ಷಗಳನ್ನು ಪೂರೈಸಿ ಸುವರ್ಣ ಮಹೋತ್ಸವ ಸಂಭ್ರಮದಲ್ಲಿದೆ.

ಗ್ರಾಮೀಣ ಭಾಗದ ಮಕ್ಕಳಿಗೆ ಉನ್ನತ ಶಿಕ್ಷಣ ದೊರೆಯಬೇಕು ಎಂಬ ಉದ್ದೇಶದಿಂದ ಸುತ್ತೂರು ಶ್ರೀಮಠದ ೨೩ನೆಯ ಪೀಠಾಧಿಪತಿ ಗಳಾಗಿದ್ದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ದೂರದರ್ಶಿತ್ವದ ಫಲವಾಗಿ ಆರಂಭವಾದ ಕಾಲೇಜು ಇಂದು ಹೆಮ್ಮರವಾಗಿ ಬೆಳೆದು ಸಾವಿರಾರು ಮಂದಿಗೆ ಅಕ್ಷರ ದಾಸೋಹ ನೀಡುತ್ತಿದೆ.

ಮೈಸೂರಿನ ರಾಮಾನುಜ ರಸ್ತೆಯಲ್ಲಿನ ಆನೆಕರೋಟಿಯ ಆವರಣದಲ್ಲಿ ೧೯೬೪ರಲ್ಲಿ ಕಾಲೇಜು ಸಣ್ಣ ಪ್ರಮಾಣದಲ್ಲಿ ಪ್ರಾರಂಭವಾಯಿತು. ಮೊದಲಿಗೆ ಕೇವಲ ೫೨ ವಿದ್ಯಾರ್ಥಿಗಳು ಮತ್ತು ೧೧ ಮಂದಿ ಸಿಬ್ಬಂದಿವರ್ಗದಿಂದ ಪ್ರಾರಂಭವಾದ ಈ ಕಾಲೇಜಿನಲ್ಲಿ ಇಂದು ಪಿಯುಸಿ, ಪದವಿ, ಸ್ನಾತಕೋತ್ತರ ವಿಭಾಗಗಳಿದ್ದು, ಸುಮಾರು ೩,೬೦೦ಕ್ಕೂ ಹೆಚ್ಚು ವಿದ್ಯಾರ್ಥಿಗಳು ಇಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ೧೯೦ ಮಂದಿ ಬೋಧಕರು ಮತ್ತು ೭೦ ಮಂದಿ ಬೋಧಕೇತರರಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಪಿಸಿಎಂ, ಪಿಸಿಸಿಎಸ್, ಪಿಎಂಇ, ಸಿಬಿಜೆಡ್, ಬಿಎಂಬಿಟಿ ಹೀಗೆ ಎಲ್ಲಾ ವಿಭಾಗಗಳಲ್ಲಿ ಬೋಧನೆ ಮಾಡುತ್ತಿದ್ದು, ಕಲಾ ವಿಭಾಗದಲ್ಲಿ ಎಲ್ಲಾ ಮಾನವಿಕ ವಿಷಯಗಳನ್ನು ಬೋಧನೆ ಮಾಡಲಾಗುತ್ತಿದೆ. ವಾಣಿಜ್ಯ ವಿಭಾಗದಲ್ಲಿ ಇತ್ತೀಚಿನ ಪಠ್ಯಕ್ರಮ ಸೇರಿದಂತೆ ಎಲ್ಲಾ ವಿಭಾಗಗಳಲ್ಲೂ ಶಿಕ್ಷಣ ನೀಡಲಾಗುತ್ತಿದೆ.

ಉನ್ನತ ಶಿಕ್ಷಣಕ್ಕೂ ಅಡಿಯಿಟ್ಟ ಸಂಸ್ಥೆ ಸ್ನಾತಕೋತ್ತರ ವಿಭಾಗವನ್ನು ಆರಂಭಿಸಿತು. ೪ ವಿಭಾಗಗಳಲ್ಲಿ ಉನ್ನತ ಮಟ್ಟದ ಸಂಶೋಧನೆ ನಡೆಸಲು ಅವಕಾಶವಿದೆ. ೨೦೧೦ರಲ್ಲಿ ರಾಜ್ಯ ಸರ್ಕಾರದ ಸಹಕಾರದಿಂದ ಬಯೊಟೆಕ್ನಾಲಜಿ ಫಿನಿಷಿಂಗ್ ಸ್ಕೂಲ್ ಆರಂಭವಾಯಿತು. ೨೦೧೨ರಲ್ಲಿ ಸಂಸ್ಥೆಯು ಭಾರತ ಸರ್ಕಾರದ ಜೈವಿಕ ತಂತ್ರಜ್ಞಾನ ಇಲಾಖೆಯ ಸ್ಟಾರ್ ಕಾಲೇಜ್ ಯೋಜನೆಯಲ್ಲಿ ಪರಿಗಣಿತವಾಗಿದೆ.

ಕಾಲೇಜು ೨೦೦೧ರಲ್ಲಿ ನ್ಯಾಕ್ ಮೌಲ್ಯಮಾಪನಕ್ಕೊಳಗಾಗಿ ನಾಲ್ಕು ನಕ್ಷತ್ರಗಳ (ಫೋರ್ ಸ್ಟಾರ್) ಮಾನ್ಯತೆ ಪಡೆಯಿತು. ಅನಂತರ ೨೦೦೮ ಮತ್ತು ೨೦೧೪ರಲ್ಲಿ ಪುನರ್‌ಮೌಲ್ಯಮಾಪನಕ್ಕೆ ಒಳಪಟ್ಟು 'ಎ' ಗ್ರೇಡ್ ಮಾನ್ಯತೆ ಪಡೆಯಿತು. ೨೦೦೫ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿರುವ ಈ ಸಂಸ್ಥೆಯು ೨೦೧೦ರಲ್ಲಿ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದಿಂದ ಉತ್ಕೃಷ್ಟತಾ ಅಂತಸ್ಸಾಮರ್ಥ್ಯವುಳ್ಳ ಕಾಲೇಜು (ಕಾಲೇಜ್ ವಿತ್ ಪೊಟೆನ್ಷಿಯಲ್ ಫಾರ್ ಎಕ್ಸಲೆನ್ಸ್) ಎಂದು ಪರಿಗಣಿತವಾಗಿದೆ.

೨೦೧೪-೧೫ನೇ ಸಾಲಿನಲ್ಲಿ ಯುಜಿಸಿ ಪ್ರಾಯೋಜಿತ ಕೌಶಲ್ಯಾಧಾರಿತ ಪದವಿ ಕೋರ್ಸುಗಳನ್ನು ಹಾಗೂ ಕಮ್ಯುನಿಟಿ ಕಾಲೇಜು ಸ್ಕೀಂನಲ್ಲಿ ಅಡ್ವಾನ್ಸ್ಡ್ ಡಿಪ್ಲೊಮಾ ಕೋರ್ಸುಗಳನ್ನು ಪ್ರಾರಂಭಿಸಲಾಗಿದೆ.

೧೯೯೦-೯೧ನೇ ಸಾಲಿನಲ್ಲಿ ಕಾಲೇಜು ೨೫ ವರ್ಷಗಳ ಸವಿನೆನಪಿಗಾಗಿ ರಜತಮಹೋತ್ಸವನ್ನು ಆಚರಿಸಿತು. ೧೯೯೦ ರ ಜನವರಿ ೩ರಂದು ಮಾಜಿ ಪ್ರಧಾನಮಂತ್ರಿ ರಾಜೀವ್ ಗಾಂಧಿಯವರು ರಜತ ಮಹೋತ್ಸವವನ್ನು ಉದ್ಘಾಟಿಸಿದರೆ, ೧೯೯೧ ಏಪ್ರಿಲ್ ೧ರಂದು ಜರುಗಿದ ಸಮಾರೋಪ ಸಮಾರಂಭದಲ್ಲಿ ಮಾಜಿ ಪ್ರಧಾನಮಂತ್ರಿ ವಿ.ಪಿ. ಸಿಂಗ್‌ರವರು ಸಮಾರೋಪ ಭಾಷಣ ಮಾಡಿದರು.

ಸುಮಾರು ೨೮ ವರ್ಷಗಳ ಕಾಲ ರಾಮಾನುಜ ರಸ್ತೆಯಲ್ಲಿ ಕಾರ್ಯ ನಿರ್ವಹಿಸಿದ ಕಾಲೇಜನ್ನು ಈಗಿನ ಶ್ರೀಗಳಾದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ದೂರದರ್ಶಿತ್ವದ ಫಲವಾಗಿ ೧೯೯೩ ರಲ್ಲಿ ಮೈಸೂರಿನ ಊಟಿ ರಸ್ತೆಯ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಏಳು ಎಕರೆ ಪ್ರದೇಶದಲ್ಲಿ ನಿರ್ಮಿಸಲಾದ ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲಾಯಿತು.

ಸುವರ್ಣಮಹೋತ್ಸವದ ಅಂಗವಾಗಿ ವಿಶೇಷ ಉಪನ್ಯಾಸಮಾಲೆ, ಸಂಸ್ಮರಣ ಗ್ರಂಥ, ವಿಜ್ಞಾನ ವಸ್ತುಪ್ರದರ್ಶನ ಮತ್ತು ಸ್ಪರ್ಧೆ, ವಿಚಾರಸಂಕಿರಣ ಮತ್ತು ಕಾರ್ಯಾಗಾರಗಳನ್ನು ಒಂದು ವರ್ಷದ ಅವಧಿಯವರೆಗೆ ವ್ಯವಸ್ಥೆ ಮಾಡಲಾಗುತ್ತದೆ. ಹಿರಿಯ ವಿದ್ಯಾರ್ಥಿಗಳ ಸಮಾವೇಶ, ಸಾಂಸ್ಕೃತಿಕ ಸ್ಪರ್ಧೆ, ನಿವೃತ್ತರಾದ ಹಾಗೂ ವರ್ಗಾವಣೆಗೊಂಡ ನೌಕರರ ಸಮಾವೇಶ, ದತ್ತಿಗಳ ಸ್ಥಾಪನೆ ಇತ್ಯಾದಿ ಕಾರ್ಯಕ್ರಮಗಳನ್ನು ವರ್ಷವಿಡೀ ಆಯೋಜಿಸಲಾಗುತ್ತದೆ ಎಂದು ಮುಖ್ಯ ಆಡಳಿತಾಧಿಕಾರಿ ಪ್ರೊ.ಸಾಂಬಶಿವಯ್ಯ ತಿಳಿಸಿದರು.

# TIMES OF INDIA 09-04-2015

# CM to launch JSS' golden jubilee celebrations

TIMES NEWS NETWORK

**Mysuru:** Chief minister Siddaramaiah will launch the yearlong golden jubilee celebrations of JSS College of Arts, Commerce and Science on April 8.

He will also inaugurate the additional floor at the PG Centre, said JSS Mahavidyapeetha secretary S P Manjunath on Sunday. "We plan to host alumni meet some time during the year long celebrations so that old students get a chance to get back to their alma mater," he said.

## YEARLONG EVENT

Recognized by the UGC as the institution with potential for excellence, the autonomous college has planned guest lecture series, exhibitions and publications as part of the celebrations. The college was set up at Aane Karoti in Agrahara, the place where Mysuru royals used to house elephants, in 1964. The college was started by late pontiff of Suttur mutt, Shivaratri Rajendra Swami to extend education to the poor, mainly from rural areas. Initially, it had 52 students and 11 staff. It is one of 350 institutions run by JSS Mahavidyapeetha and is re-accredited by NAAC with A grade.

The Centre's department of biotechnology has identified the institution under its star college scheme while the Karnataka government has sponsored Biotechnology Finishing School at the college. Two former prime ministers — Rajiv Gandhi and V P Singh — were part of its silver jubilee celebrations while then president Shankar Dayal Sharma inaugurated its new campus on Ooty Road in 1993.

Former president Abdul Kalam too has visited the college to launch the golden jubilee auditorium.

# ಕನ್ನಡಪ್ರಭ ದಿನಪತ್ರಿಕೆ 06-04-2015

# ಜೆಎಸ್‌ಎಸ್ ಕಾಲೇಜಿಗೆ ಸುವರ್ಣ ಗರಿ: ವರ್ಷವಿಡೀ ಕಾರ್ಯಕ್ರಮ

ಮೈಸೂರು: ಸುವರ್ಣ ಸಂಭ್ರಮದಲ್ಲಿರುವ ಊಟಿ ರಸ್ತೆಯ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಮಹೋತ್ಸವ ನೆನಪಿಗಾಗಿ ವರ್ಷವಿಡೀ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಕಾಲೇಜಿನ ಸುವರ್ಣ ಮಹೋತ್ಸವ ಅಂಗವಾಗಿ ಏ. 8 ರಂದು ಬೆಳಿಗ್ಗೆ 10.30ಕ್ಕೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸುವರ್ಣ ಮಹೋತ್ಸವ ಹಾಗೂ ಸ್ನಾತಕೋತ್ತರ ಕೇಂದ್ರದ ಮೂರನೇ ಮಹಡಿ ಉದ್ಘಾಟಿಸುವರು ಎಂದು ಜೆಎಸ್‌ಎಸ್ ವಿದ್ಯಾಪೀಠದ ಕಾರ್ಯದರ್ಶಿ ಎಸ್.ಪಿ. ಮಂಜುನಾಥ್ ಭಾನುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ವಿ. ಶ್ರೀನಿವಾಸಪ್ರಸಾದ್ ಅಧ್ಯಕ್ಷತೆ ವಹಿಸಲಿದ್ದು, ಸಹಕಾರ ಸಚಿವ ಎಚ್.ಎಸ್. ಮಹದೇವ ಪ್ರಸಾದ್ ಮಹಿಳಾ ವಿದ್ಯಾರ್ಥಿನಿಲಯದ ಮೊದಲ ಮತ್ತು ಎರಡನೆಯ ಮಹಡಿ ಉದ್ಘಾಟಿಸುವರು. ಲೋಕೋಪಯೋಗಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಅನಿಮೇಷನ್ ಪ್ರಯೋಗಾಲಯವನ್ನು, ಲೋಕಸಭಾ ಸದಸ್ಯ ಪ್ರತಾಪ ಸಿಂಹ ವ್ಯಾಯಾಮ ಶಾಲೆ ಮತ್ತು ಒಳಾಂಗಣ ಕ್ರೀಡಾಂಗಣವನ್ನು ಉದ್ಘಾಟಿಸುವರು ಎಂದು ಅವರು ವಿವರಿಸಿದರು.

ಶಾಸಕ ಎಂ.ಕೆ. ಸೋಮಶೇಖರ್ ಕೌಶಲಾಧಾರಿತ ತರಗತಿಯ ವೆಬ್‌ಸೈಟ್ ಅನಾವರಣಗೊಳಿಸುವರು. ಮೇಯರ್ ಆರ್. ಲಿಂಗಪ್ಪ ಪದವಿ ಕೋರ್ಸ್‌ಗಳ ಪರಿಚಯ ಪತ್ರವನ್ನು, ಮಾಜಿ ಸಂಸದ ಎಚ್. ವಿಶ್ವನಾಥ್ ಅಡ್ವಾನ್ಸ್ಡ್ ಡಿಪ್ಲೊಮಾಕೋರ್ಸ್‌ಗಳಪರಿಚಯಪತ್ರಗಳನ್ನು ಬಿಡುಗಡೆ ಮಾಡುವರು ಎಂದು ಅವರು ತಿಳಿಸಿದರು.

ಸುವರ್ಣ ಮಹೋತ್ಸವದ ಅಂಗವಾಗಿ ಒಂದು ವರ್ಷ ವಿಶೇಷ ಉಪನ್ಯಾಸಮಾಲೆ, ಸಂಸ್ಮರಣಾ ಗ್ರಂಥ, ವಿಜ್ಞಾನ ವಸ್ತುಪ್ರದರ್ಶನ ಮತ್ತು ಸ್ಪರ್ಧೆ ನಡೆಯಲಿದೆ ಎಂದರು.

ಸಂಯುಕ್ತ ಕರ್ನಾಟಕ ದಿನಪತ್ರಿಕೆ 09-04-2015

# ಧರ್ಮದ ತಳಹದಿಯ, ಮೌಲ್ಯಯುತ ಶಿಕ್ಷಣ ಇಂದಿನ ಅಗ

## ಸರ್ವಾಂಗೀಣ ಬೆಳವಣಿಗೆಗೆ ಪೂರಕ ಬೋಧನೆ ಅವಶ್ಯಕ * ಎಂಜಿನಿಯರಿಂಗ್, ಮೆಡಿಕಲ್ ಬಿಟ್ಟು ಬೇರೆ ಕೋರ್ಸ್

ಮೈಸೂರು

ವಿದ್ಯಾರ್ಥಿ, ವ್ಯಕ್ತಿಯ ಬದುಕಿನ ಸರ್ವಾಂಗೀಣ ಬೆಳವಣಿಗೆ, ವಿಕಾಸಕ್ಕೆ ಪೂರಕವಾಗುವ ಶಿಕ್ಷಣ ನೀಡಬೇಕು. ಸಾಮಾನ್ಯ ಶಿಕ್ಷಣವಾದರೂ ಗುಣಮಟ್ಟದ ಶಿಕ್ಷಣ ಅಗತ್ಯವಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದ ಊಟಿರಸ್ತೆಯ ಜೆಎಸ್‌ಎಸ್ ಕಲಾ,ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಆವರಣದಲ್ಲಿ ಬುಧವಾರ ಆಯೋಜಿಸಿದ್ದ ಸುವರ್ಣ ಮಹೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಸುತ್ತೂರು ಮಠ ಆಧ್ಯಾತ್ಮಿಕವಲ್ಲದೆ ಶಿಕ್ಷಣ, ಅನ್ನ ದಾಸೋಹ ಸೇರಿದಂತೆ ಇನ್ನಿತರ ಕಾರ್ಯಕ್ರಮ ಹಮ್ಮಿಕೊಂಡಿದೆ. ನಗರ ಪ್ರದೇಶಕ್ಕಿಂತ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳೇ ಹೆಚ್ಚಾಗಿ ವ್ಯಾಸಂಗ ಮಾಡುತ್ತಿರುವುದು ಶ್ಲಾಘನೀಯ ಎಂದರು.

**ಬದುಕಿಗೆ ಸಂಬಂಧಿಸಿದ ಶಿಕ್ಷಣ:** ಶಿಕ್ಷಣ ಎಲ್ಲರಿಗೂ ಸಿಗಬೇಕು. ಅದರಿಂದ ಯಾರೂ ವಂಚಿತರಾಗಬಾರದು. ಶತಮಾನಗಳಿಂದ ಶಿಕ್ಷಣದಿಂದ ವಂಚಿತಗೊಂಡಿದ್ದೇ ಅನೇಕ ಸಮಸ್ಯೆಗಳಿಗೆ ಕಾರಣವಾಗಿದೆ. ಹಾಗಾಗಿ, ಶಿಕ್ಷಣ ಪ್ರತಿಯೊಬ್ಬರಿಗೂ ಸಿಗಬೇಕು. ಶಿಕ್ಷಣ ಎಂದರೆ ಸಾಮಾನ್ಯ ಶಿಕ್ಷಣವಲ್ಲ, ಗುಣಮಟ್ಟದ ಶಿಕ್ಷಣ ನೀಡಬೇಕು. ಬದುಕಿಗೆ ಸಂಬಂಧಿಸಿದ ಶಿಕ್ಷಣ ದೊರಕಿದರೆ ವ್ಯಕ್ತಿಯು ತನ್ನ ವ್ಯಕ್ತಿತ್ವ ರೂಪಿಸಿಕೊಳ್ಳಲು ಹಾಗೂ ಜವಾಬ್ದಾರಿ ನಾಗರಿಕನಾಗಲು ಸಾಧ್ಯವಾಗಲಿದೆ ಎಂದು ಹೇಳಿದರು.



ಮೈಸೂರಿನಲ್ಲಿ ಬುಧವಾರ ನಡೆದ ಜೆಎಸ್‌ಎಸ್ ಸುವರ್ಣ ಮಹೋತ್ಸವ ಸಮಾರಂಭವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಸುತ್ತೂರು ಶ್ರೀ, ಸಚಿವರಾದ ವಿ.ಶ್ರೀನಿವಾಸ್ ಪ್ರಸಾದ್, ಡಾ.ಎಚ್.ಸಿ.ಮಹದೇವಪ್ಪ, ಎಚ್.ಎಸ್. ಮಹದೇವಪ್ರಸಾದ್ ಇತರರು ಇದ್ದರು.

**ವೈಚಾರಿಕತೆ ಬೆಳೆಸಿಕೊಳ್ಳಿ:** ಧರ್ಮದ ತಳಹದಿ ಮೇಲೆ ಶಿಕ್ಷಣ ಕೊಡಬೇಕು. ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು. ಕೆಲವರು ಶಿಕ್ಷಣ ಪಡೆದಿರುತ್ತಾರೆ. ಪದವೀಧರರಾಗಿರುತ್ತಾರೆ. ಆದರೆ, ಬದುಕನ್ನು ಅರ್ಥ ಮಾಡಿಕೊಳ್ಳಲು ವಿಫಲರಾಗುತ್ತಾರೆ. ಹಾಗಾಗಿ, ಜ್ಞಾನ ಪಡೆಯುವುದಷ್ಟೇ ಅಲ್ಲದೆ, ವೈಚಾರಿಕತೆ ಬೆಳೆಸಿಕೊಳ್ಳಬೇಕು. ನಾವು ವೈಚಾರಿಕತೆ ಬೆಳೆಸಿಕೊಳ್ಳದಿದ್ದರೆ ಜ್ಞಾನಿಗಳು ಅಂತ ಹೇಳಿಸಿಕೊಳ್ಳಲು ಸಮಂಜಸವಾಗಲ್ಲ ಎಂದು ಅಭಿಪ್ರಾಯಪಟ್ಟರು.

> **"ಶಿಕ್ಷಣದಲ್ಲೇ ಜೆಎಸ್‌ಎಸ್ ಮಠ ಕ್ರಾಂತಿಯನ್ನೇ ಮಾಡಿದೆ. ವಿವಿಧತೆಯಲ್ಲಿ ಏಕತೆ ಅನ್ನುವ ದೇಶದಲ್ಲಿ ಇಂದಿಗೂ ಏಕತೆ ಕಾಣುತ್ತಿಲ್ಲದ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು. ನಾಡನ್ನು ಕಟ್ಟುವ ವಿದ್ಯಾರ್ಥಿಗಳು ಒಂದಾಗಬೇಕು. ೧೨ನೇ ಶತಮಾನದಲ್ಲಿ ಬಸವಣ್ಣ ಹೇಳಿದ್ದನ್ನು ಮಾಡಬೇಕು. ಅನುಸರಿಸಬೇಕು.**
> **–ವಿ.ಶ್ರೀನಿವಾಸ್ ಪ್ರಸಾದ್, ಕಂದಾಯ ಸಚಿವ.**

**ಮೆಡಿಕಲ್ ಮುಖ್ಯವಲ್ಲ:** ಪ್ರತಿಯೊಬ್ಬರೂ ಮೆಡಿಕಲ್, ಎಂಜಿನಿಯರಿಂಗ್ ಮಾಡಬೇಕೆಂಬ ಭಾವನೆ ಹೊಂದುವುದು ಸರಿಯಲ್ಲ. ಎಲ್ಲ ವಿಷಯದಲ್ಲೂ ಓದಿದರೂ ಉದ್ಯೋಗ ಸಿಗಲಿದೆ. ಬದುಕು ಕಟ್ಟಿಕೊಳ್ಳಲಿಕ್ಕೆ ಶಿಕ್ಷಣ ಬೇಕು. ಅದನ್ನು ಬಿಟ್ಟು ಬೇರೆಯವರು ಮೆಡಿಕಲ್ ಮಾಡುತ್ತಾರೆಂದು ಹೇಳಿ ನಾವು ಹೋಗದೆ ಬೇರೆ ಬೇರೆ ಕೋರ್ಸ್ ಕಲಿಯಬಹುದು ಎಂದರು.

**ಪಠ್ಯೇತರ ಚಟುವಟಿಕೆ ಅಗತ್ಯ:** ಅಧ್ಯಕ್ಷತೆ ವಹಿಸಿದ್ದ ಕಂದಾಯ ಸಚಿವ ವಿ.ಶ್ರೀನಿವಾಸ್ ಪ್ರಸಾದ್ ಮಾತನಾಡಿ, ಅನ್ನದಾಸೋಹದ ಜತೆಗೆ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಬೇಕೆಂಬ ವಚನಕಾರರ ಆಸೆಯಂತೆ ಜೆಎಸ್‌ಎಸ್ ಮಹಾವಿದ್ಯಾಪೀಠ ನಡೆದುಕೊಳ್ಳುತ್ತಿದೆ. ಐದು ಸಾವಿರ ಇತಿಹಾಸ ಹೊಂದಿರುವ ಭಾರತದಲ್ಲಿ ಸಾಮರಸ್ಯ ಬದುಕು ಬರಲಿಲ್ಲ. ಮಾನವೀಯ ಚಿಂತನೆ ಬರಲಿಲ್ಲ. ನಾವು ಒಂದು ಎನ್ನುವ ಭಾವನೆ ಬರಲಿಲ್ಲ. ಹಾಗಾಗಿ, ನಾಲ್ಕು ಗೋಡೆಯ ಶಿಕ್ಷಣವಲ್ಲದೆ, ಪಠ್ಯೇತರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬೇಕು ಎಂದರು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಸಚಿವರಾದ ಡಾ.ಎಚ್.ಸಿ. ಮಹದೇವಪ್ಪ, ಎಚ್.ಎಸ್. ಮಹದೇವಪ್ರಸಾದ್, ಶಾಸಕ ಎಂ.ಕೆ. ಸೋಮಶೇಖರ್, ಜಿಪಂ ಅಧ್ಯಕ್ಷೆ ಡಾ.ಪುಷ್ಪಾ ಅಮರನಾಥ್, ಉಪಾಧ್ಯಕ್ಷ ಎಲ್.ಮಾದಪ್ಪ, ಮೇಯರ್ ಆರ್.ಲಿಂಗಪ್ಪ, ಉಪ ಮೇಯರ್ ಎಂ.ಮಹದೇವಮ್ಮ, ಮಾಜಿ ಶಾಸಕ ಎಸ್.ಬಾಲರಾಜು, ಪ್ರೊ.ಕೆ.ಆರ್.ಮಲ್ಲಿಕಾರ್ಜುನಪ್ಪ, ಪಾಲಿಕೆ ಸದಸ್ಯರಾದ ಸುನೀಲ್, ಎಂ.ಸುನೀಲ್‌ಕುಮಾರ್, ಉನ್ನತ ಶಿಕ್ಷಣ ಇಲಾಖೆ ಕಾರ್ಯದರ್ಶಿ ರಾಜ್‌ಕುಮಾರ್ ಖತ್ರಿ ಇದ್ದರು.

### ಮತ್ತೆ ಮೌಢ್ಯ ಬಿತ್ತುವ ಯತ್ನ

ಸಾಮಾಜಿಕ ವ್ಯವಸ್ಥೆಯಲ್ಲಿ ಶತಶತಮಾನಗಳಿಂದ ಮೌಢ್ಯ, ಕಂದಾಚಾರ ಬೆಳೆದು ಬಂದಿದೆ. ಸಮಾಜವು ಆಧಾರರಹಿತ–ಸಹಿತ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಬಸವಣ್ಣ ಹೇಳಿದಂತೆ ಸತ್ಯ–ಅಸತ್ಯ ಎನ್ನುವುದನ್ನು ಕಾಣಬೇಕು ಎಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸಮಾಜದಲ್ಲಿ ಮತ್ತೆ ಮೌಢ್ಯ,ಕಂದಾಚಾರ ಬಿತ್ತಲು ಪ್ರಯತ್ನ ನಡೆಯುತ್ತಿದೆ. ಬೆಳಗ್ಗೆ ಯಾವುದೇ ಟಿವಿ ಹಾಕಿದರೂ ಇದೇ ತುಂಬಿರುತ್ತದೆ. ಯಾಕಪ್ಪ ಓದಲಿಲ್ಲ ಎಂದರೇ ಹಣೆಬರಹ ಸರಿಯಿಲ್ಲವೆಂದು ಕೈ ಚೆಲ್ಲಿದರೆ ಸಾಲದು. ನಮ್ಮ ಪರಿಶ್ರಮ, ಪ್ರಯತ್ನ ಮಾಡಬೇಕು. ಮೆರಿಟ್ ಎನ್ನುವುದು ಯಾರಿಗೂ ರಕ್ತಗತವಾಗಿ ಬಂದಿರಲ್ಲ. ನಮ್ಮ ಶ್ರಮ,ನಿಷ್ಠೆ ಹಾಗೂ ಗುರಿ ಮುಖ್ಯವಾದರೇ ಬದುಕಿನಲ್ಲಿ ಸಾಧಿಸಬಹುದು ಎಂದು ಕಿವಿಮಾತು ಹೇಳಿದರು

ಪ್ರಜಾವಾಣಿ ದಿನಪತ್ರಿಕೆ 09-04-2015

## ಕಾಲೇಜು ಸುವರ್ಣ ಮಹೋತ್ಸವ: ಸಚಿವ ಶ್ರೀನಿವಾಸ ಪ್ರಸಾದ್ ಅಭಿಮತ

# ಜೆಎಸ್‌ಎಸ್ ಸಾಧನೆ ದೊಡ್ಡದು

ಪ್ರಜಾವಾಣಿ ವಾರ್ತೆ

ಮೈಸೂರು: ಜೆಎಸ್‌ಎಸ್ ಶಿಕ್ಷಣ ಸಂಸ್ಥೆ 50 ವರ್ಷದಲ್ಲಿ ಮಾಡಿರುವ ಸಾಧನೆ ದೊಡ್ಡದು ಎಂದು ಕಂದಾಯ ಸಚಿವ ವಿ. ಶ್ರೀನಿವಾಸ ಪ್ರಸಾದ್ ಶ್ಲಾಘಿಸಿದರು.

ಇಲ್ಲಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಬುಧವಾರ ನಡೆದ ಸುವರ್ಣ ಮಹೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಮೊದಲಿಗೆ 52 ವಿದ್ಯಾರ್ಥಿಗಳು ಹಾಗೂ 11 ಸಿಬ್ಬಂದಿಯಿಂದ ಆರಂಭಗೊಂಡ ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಇಂದು 3,600 ವಿದ್ಯಾರ್ಥಿಗಳು ಹಾಗೂ 260 ಸಿಬ್ಬಂದಿಯನ್ನು ಹೊಂದಿರುವುದು ರಾಜ್ಯದ ಶೈಕ್ಷಣಿಕ ವಲಯದಲ್ಲಿ ದೊಡ್ಡ ಹೆಗ್ಗುರುತು. ಶಿಕ್ಷಣವು ಎಲ್ಲರಿಗೂ ದಕ್ಕುವಂತಾದಾಗ ಮಾತ್ರ ಸಮಾನತೆ ಮೂಡುತ್ತದೆ ಎಂದರು.

ಸಿಮೆಂಟ್ ಸರಬರಾಜು ಮಾಡುತ್ತಿದ್ದ ನನ್ನನ್ನು ಕಾಲೇಜಿಗೆ ಸೇರುವಂತೆ ಹಿಂದಿನ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರು ಪ್ರೇರೇಪಿಸಿದರು. ಹೀಗಾಗಿ, ನಾನು ಕಾಲೇಜು ಶಿಕ್ಷಣ ಪೂರೈಸಿದೆ ಎಂದು ಹಳೆಯ ನೆನಪನ್ನು ಸಚಿವ ಎಚ್.ಎಸ್. ಮಹದೇವಪ್ರಸಾದ್ ಬಿಚ್ಚಿಟ್ಟರು.

ಸುವರ್ಣ ಮಹೋತ್ಸವ ಹಾಗೂ ಅದರ ಲಾಂಛನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರೆ, ಮೇಯರ್ ಆರ್. ಲಿಂಗಪ್ಪ ಕಮ್ಯುನಿಟಿ ಕಾಲೇಜು, ಅಡ್ವಾನ್ಸ್‌ಡ್ ಡಿಪ್ಲೊಮಾ ಕೋರ್ಸ್ ಹಾಗೂ ಲೋಕೋಪಯೋಗಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಕೌಶಲಾಧಾರಿತ ಪದವಿ ಕೋರ್ಸ್ ಪರಿಚಯಪತ್ರ ಬಿಡುಗಡೆ ಮಾಡಿದರು.



ಮೈಸೂರಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಬುಧವಾರ ನಡೆದ ಸುವರ್ಣ ಮಹೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಹೋತ್ಸವದ ಲಾಂಛನ ಬಿಡುಗಡೆ ಮಾಡಿದರು

**ಕೊಂಬು ಕಹಳೆ ಸ್ವಾಗತ:** ಇದಕ್ಕೂ ಮುನ್ನ ತಡವಾಗಿ ಕಾಲೇಜನ್ನು ಪ್ರವೇಶಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕೊಂಬು, ಕಹಳೆಯ ಸ್ವಾಗತ ನೀಡಲಾಯಿತು. ಕಹಳೆ ಊದುತ್ತಿದ್ದವರಿಗೆ ಸಿದ್ದರಾಮಯ್ಯ ಹಣವನ್ನು ನೀಡಿ ಮೆಚ್ಚುಗೆ ಸೂಚಿಸಿದರು.

ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶಾಸಕ ಎಂ.ಕೆ. ಸೋಮಶೇಖರ್, ಮಾಜಿ ಶಾಸಕ ಕೆ.ಆರ್. ಮಲ್ಲಿಕಾರ್ಜುನಪ್ಪ, ಮುಡಾ ಕೆ.ಆರ್. ಮೋಹನ್‌ಕುಮಾರ್, ಉಪ ಮೇಯರ್ ಮಹದೇವಮ್ಮ, ಜಿಲ್ಲಾ ಪಂಚಾಯಿತಿ ಅಧ್ಯಕ್ಷೆ ಡಾ.ಪುಷ್ಪಾ ಅಮರನಾಥ್, ಸಂಸ್ಥೆಯ ಸಿಬ್ಬಂದಿ, ವಿದ್ಯಾರ್ಥಿಗಳು ಹಾಜರಿದ್ದರು.

**ಮುಖ್ಯಾಂಶಗಳು**

- ಜೆಎಸ್‌ಎಸ್ ಸಾಧನೆ ಕುರಿತು ಗಣ್ಯರ ಶ್ಲಾಘನೆ
- ಮೌಢ್ಯ ತೊರೆಯಲು ಮುಖ್ಯಮಂತ್ರಿ ಕರೆ
- ಪಠ್ಯೇತರ ಚಟುವಟಿಕೆ ನಾಯಕತ್ವಕ್ಕೆ ಪೂರಕ

ಆಂದೋಲನ ದಿನಪತ್ರಿಕೆ 09-04-2015

# ಜೆಎಸ್‌ಎಸ್ ಪದವಿ ಕಾಲೇಜಿನ ಸುವರ್ಣ ಸಂಭ್ರಮಕ್ಕೆ ಚಾಲನೆ

## ವೈಚಾರಿಕತೆಯಿಂದ ಮೌಢ್ಯತೆ ನಿವಾರಣೆ ಸಾಧ್ಯ: ಸಿದ್ದರಾಮಯ್ಯ

ಮೈಸೂರು,ಏ.೮–ಶೈಕ್ಷಣಿಕ ಹಂತದಲ್ಲಿ ವೈಚಾರಿಕತೆ ಬೆಳೆಸಿಕೊಂಡಾಗ ಮಾತ್ರ ಮೌಢ್ಯತೆಯನ್ನು ದೂರ ಮಾಡಲು ಸಾಧ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿ ಪ್ರಾಯಪಟ್ಟರು.

ಜೆಎಸ್‌ಎಸ್ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಕಾಲೇಜಿನ ಸುವರ್ಣ ಮಹೋತ್ಸವ ಮತ್ತು ಸ್ನಾತಕೋತ್ತರ ಕೇಂದ್ರದ ಮೂರನೇ ಮಹಡಿ ಉದ್ಘಾಟಿಸಿ ಅವರು ಮಾತನಾಡಿದರು. ಶೈಕ್ಷಣಿಕ ಹಂತದಲ್ಲಿ ವಿದ್ಯಾರ್ಥಿಗಳು ಸಾಮಾನ್ಯ ಜ್ಞಾನ ಬೆಳೆಸಿಕೊಂಡರೆ ಸಾಲದು, ಇದಕ್ಕೂ ಮಿಗಿಲಾದ ವೈಚಾರಿಕತೆ ಬೆಳೆಸಿಕೊಂಡಾಗ ಮಾತ್ರ ಸಮಾಜದ ಮೌಢ್ಯತೆಯನ್ನು ದೂರ ಮಾಡಲು ಸಾಧ್ಯ ಎಂದು ಹೇಳಿದರು.

ಇಂದು ಟಿವಿ ಮಾಧ್ಯಮಗಳು ದಿನ ಬೆಳಗಾದರೆ ಸಮಾಜದಲ್ಲಿ ಮೌಢ್ಯಗಳನ್ನು ಬಿತ್ತುತ್ತಿವೆ. ದೆವ್ವಗಳ ಬಗ್ಗೆ ತೋರಿಸುತ್ತಾರೆ. ದೆವ್ವ ಎನ್ನುವುದು ನೂರಕ್ಕೆ ನೂರು ಭಾಗ ಇಲ್ಲವೇ ಇಲ್ಲ. ಇಂಥವುಗಳ ಸತ್ಯ ಅಸತ್ಯಗಳ ಬಗ್ಗೆ ವಿಚಾರ ಮಾಡಬೇಕಿದೆ. ಇಂಥ ಮೌಢ್ಯಗಳನ್ನು ಪ್ರಶ್ನಿಸುವಂತಹ ವೈಚಾರಿಕ ಜ್ಞಾನ ಶಿಕ್ಷಣದ ಹಂತದಲ್ಲಿ ವಿದ್ಯಾರ್ಥಿಗಳಿಗೆ ಸಿಗಬೇಕು. ಆಗ ಮಾತ್ರ ಜ್ಞಾನಾರ್ಜನೆಗೆ ಉತ್ತಮ ವಾತಾವರಣ ನಿರ್ಮಾಣವಾಗುತ್ತದೆ ಎಂದರು.

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉಪಸ್ಥಿತರಿದ್ದರು. ಜಿಲ್ಲಾ ಉಸ್ತುವಾರಿ ಸಚಿವ ವಿ. ಶ್ರೀನಿವಾಸಪ್ರಸಾದ್, ಸಹಕಾರ ಸಚಿವ ಹೆಚ್.ಎಸ್. ಮಹಾದೇವಪ್ರಸಾದ್ ಮಹಿಳಾ ವಿದ್ಯಾರ್ಥಿ ನಿಲಯದ ಮೊಲನೆಯ ಮತ್ತು ಎರಡನೆಯ ಮಹಡಿ ಉದ್ಘಾಟಿಸಿದರು. ಲೋಕೋಪಯೋಗಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಆ್ಯನಿಮೇಷನ್ ಪ್ರಯೋಗಾಲಯ ಉದ್ಘಾಟಿಸಿದರು, ಶಾಸಕ ಎಂ.ಕೆ. ಸೋಮಶೇಖರ್



ಮೈಸೂರಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಕಾಲೇಜಿನ ಸುವರ್ಣ ಮಹೋತ್ಸವವನ್ನು ಬುಧವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಚಿವರಾದ ವಿ.ಶ್ರೀನಿವಾಸ ಪ್ರಸಾದ್, ಡಾ.ಹೆಚ್.ಸಿ.ಮಹಾದೇವಪ್ಪ, ಹೆಚ್.ಎಸ್. ಮಹದೇವಪ್ರಸಾದ್, ಶಾಸಕ ಎಂ.ಕೆ.ಸೋಮಶೇಖರ್, ಮಹಾಪೌರ ಆರ್.ಲಿಂಗಪ್ಪ, ಉಪಮಹಾಪೌರರಾದ ಮಹಾದೇವಮ್ಮ, ಜಿ.ಪಂ.ಅಧ್ಯಕ್ಷೆ ಡಾ.ಪುಷ್ಪ ಅಮರ್‌ನಾಥ್ ಮುಂತಾದವರು ಚಿತ್ರದಲ್ಲಿದ್ದಾರೆ.

> ವಿದ್ಯಾರ್ಥಿಗಳು ತಾವು ಕಲಿಯುವ ಕ್ಷೇತ್ರದಲ್ಲಿ ಶ್ರಮ ಹಾಗೂ ಶ್ರದ್ಧೆ, ನಿಷ್ಠೆಯಿಂದ ಕಾರ್ಯ ಸಾಧಿಸುವುದಾದರೆ ಖಂಡಿತ ಯಶಸ್ಸನ್ನು ಕಾಣಬಹುದು. ನಾನು ಬದುಕಿನಲ್ಲಿ ಏನಾಗಬೇಕೆಂಬ ಗುರಿ ಇರಬೇಕು. ಹುಟ್ಟಿದ ಮೇಲೆ ಸಾರ್ಥಕ ಬದುಕು ಬಾಳಬೇಕು.
>
> ಈಗ ಲಭ್ಯವಿರುವ ಸವಲತ್ತು, ತಂತ್ರಜ್ಞಾನ ಗಳನ್ನು ಬಳಕೆ ಮಾಡಿಕೊಂಡು ವೈಚಾರಿಕ ಜ್ಞಾನ ಬೆಳೆಸಿಕೊಂಡು ಬದುಕಿನಲ್ಲಿ ಮೇಲೆ ಬರುವ ಪ್ರಯತ್ನ ಮಾಡಿ ಸಮಾಜದ ಉತ್ತಮ ಪ್ರಜೆಗಳಾಗಿ.
>
> –ಸಿದ್ದರಾಮಯ್ಯ

ಕೌಶಲಾಧಾರಿತ ಉನ್ನತ ಶಿಕ್ಷಣದ ವೆಬ್‌ಸೈಟ್ ಬಿಡುಗಡೆ ಮಾಡಿದರು. ಕೌಶಲ್ಯಾಧಾರಿತ ಪದವಿ ಕೋರ್ಸ್‌ಗಳ ಪರಿಚಯದ ಪತ್ರವನ್ನು ಮಹಾಪೌರ ಆರ್.ಲಿಂಗಪ್ಪ ಬಿಡುಗಡೆ ಮಾಡಿದರು.

ಜಿಪಂ. ಅಧ್ಯಕ್ಷೆ ಡಾ.ಪುಷ್ಪಾ ಅಮರನಾಥ್, ಉಪಾಧ್ಯಕ್ಷ ಎಲ್. ಮಾದಪ್ಪ ಉಪ ಮಹಾಪೌರರಾದ ಮಹದೇವಮ್ಮ, ಮುಡಾ ಅಧ್ಯಕ್ಷ ಕೆಆರ್.ಮೋಹನ್ ಕುಮಾರ್, ಮಾಜಿ ಶಾಸಕ ಆರ್.ಬಾಲರಾಜ್ ಮುಂತಾದವರು ಉಪಸ್ಥಿತರಿದ್ದರು.

ಜೆಎಸ್‌ಎಸ್ ಕಾಲೇಜು ಮುಖ್ಯ ಕಾರ್ಯ ನಿರ್ವಾಹಕ ಪ್ರೊ.ಬಿ.ವಿ. ಸಾಂಬಶಿವಯ್ಯ ಪ್ರಾಸ್ತಾವಿಕ ಮತ್ತು ಸ್ವಾಗತ ಭಾಷಣ ಮಾಡಿದರು. ಪ್ರೊ.ಎಂ.ಬಿ.ಮಲ್ಲಿಕಾರ್ಜುನ ಪಂಡಿತ್ ವಂದನಾರ್ಪಣೆ ಮಾಡಿದರು, ಪ್ರೊ.ಡಿ.ಎಸ್.ಸದಾಶಿವಮೂರ್ತಿ ನಿರೂಪಿಸಿದರು.

ಕನ್ನಡಪ್ರಭ ದಿನಪತ್ರಿಕೆ 09-04-2015

### ಜೆಎಸ್‌ಎಸ್ ಕಲಾ, ವಾಣಿಜ್ಯ, ವಿಜ್ಞಾನ ಕಾಲೇಜು ಸುವರ್ಣ ಮಹೋತ್ಸವ ಉದ್ಘಾಟನೆ

# ವೈಚಾರಿಕ ಅರಿವು ಅಗತ್ಯ

## ವಿದ್ಯಾರ್ಥಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಿವಿಮಾತು

**ಮೈಸೂರು:** ವಿದ್ಯಾರ್ಥಿಗಳು ಸಾಮಾನ್ಯ ಜ್ಞಾನದ ಜೊತೆಗೆ ವೈಚಾರಿಕ ಜ್ಞಾನವನ್ನೂ ಬೆಳೆಸಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು.

ನಗರದ ಊಟಿ - ನಂಜನಗೂಡು ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಸುವರ್ಣ ಮಹೋತ್ಸವ, ಸ್ನಾತಕೋತ್ತರ ಕೇಂದ್ರದ ವಿಸ್ತೃತ ಕಟ್ಟಡವನ್ನು ಅವರು ಬುಧವಾರ ಉದ್ಘಾಟಿಸಿ ಮಾತನಾಡಿದರು.

ಗುಣಮಟ್ಟದ ಶಿಕ್ಷಣ ಎಲ್ಲರಿಗೂ ಸಿಗಬೇಕು. ಶಿಕ್ಷಣದಿಂದ ಯಾರೂ ವಂಚಿತರಾಗಬಾರದು. ಗುಣಮಟ್ಟ ಶಿಕ್ಷಣದಿಂದ ಉತ್ತಮ ವ್ಯಕ್ತಿತ್ವ, ಜೀವನ ರೂಪಿಸಿಕೊಳ್ಳಲು ಸಾಧ್ಯ. ಸಮಾಜದಲ್ಲಿ ಜವಾಬ್ದಾರಿಯುತ ನಾಗರಿಕನಾಗಲು, ಮಾನವನ ಸರ್ವಾಂಗೀಣ ಅಭಿವೃದ್ಧಿಗೆ ಶಿಕ್ಷಣ ಅಗತ್ಯ. ಶಿಕ್ಷಣದಿಂದ ಮಾನಸಿಕ, ದೈಹಿಕ ವಿಕಾಸ ಆಗುತ್ತದೆ. ಧರ್ಮದ ತಳಹದಿಯ ಮೇಲೆ ಶಿಕ್ಷಣ ಇರಬೇಕು ಎಂದು ಅವರು ಅಭಿಪ್ರಾಯಪಟ್ಟರು.

ಮಾನವೀಯ ಮೌಲ್ಯ ಬೆಳೆಸಿಕೊಂಡು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಅನೇಕರ ಶಿಕ್ಷಣ ಪಡೆದು ಪದವೀಧರರಾದರೂ ಬದುಕು ಅರ್ಥ ಮಾಡಿಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಸಾಮಾನ್ಯ ಜ್ಞಾನದ ಜೊತೆಗೆ ವೈಚಾರಿಕಾ ಜ್ಞಾನ ಬೆಳೆಸಿಕೊಳ್ಳಬೇಕು. ವೈಚಾರಿಕತೆ ಇಲ್ಲದಿದ್ದರೆ ಜ್ಞಾನಿ ಎನಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಅವರು ಹೇಳಿದರು.

ಶತ ಶತಮಾನಗಳಿಂದಲೂ ಮೌಢ್ಯತೆ, ಕಂದಾಚಾರ ಬೆಳೆದು ಬಂದಿದೆ. ಸತ್ತ ಮೇಲೆ ದೆವ್ವ ಆಗುತ್ತಾರೆ ಎನ್ನುತ್ತಿದ್ದಾರೆ. ಇದು ನೂರಕ್ಕೆ ನೂರು ಸಾಧ್ಯವೇ ಇಲ್ಲ. ಹಣೆ ಬರಹವನ್ನು ಯಾರು ಬರೆಯಲು ಸಾಧ್ಯವಿಲ್ಲ. ಪೋಷಕರು ಪೂರಕ ವಾತಾವರಣ ಕಲ್ಪಿಸಿದರೇ ಶಿಕ್ಷಣ ಪಡೆದುಕೊಳ್ಳಲು ಸಾಧ್ಯವಿದೆ. ಇತ್ತೀಚೆಗೆ ಮೌಢ್ಯತೆ ಬೆಳೆಸುವ ಪ್ರಯತ್ನ ನಡೆಯುತ್ತಿದೆ. ಅದರಲ್ಲೂ ದೃಶ್ಯ ಮಾಧ್ಯಮಗಳಲ್ಲಿ ಮೌಢ್ಯ, ಕಂದಾಚಾರ ಕುರಿತ ಕಾರ್ಯಕ್ರಮಗಳು ಪ್ರಸಾರವಾಗುತ್ತಿದೆ ಎಂದರು.



ಮೈಸೂರಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಸುವರ್ಣ ಮಹೋತ್ಸವವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ಉದ್ಘಾಟಿಸಿದರು. ಸಚಿವರಾದ ಡಾ. ಎಚ್.ಸಿ. ಮಹದೇವಪ್ಪ, ವಿ. ಶ್ರೀನಿವಾಸಪ್ರಸಾದ್, ಎಚ್.ಎಸ್. ಮಹದೇವಪ್ರಸಾದ್, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮೇಯರ್ ಆರ್. ಲಿಂಗಪ್ಪ ಇದ್ದರು.

> ■ ಶತ ಶತಮಾನಗಳಿಂದಲೂ ಮೌಢ್ಯತೆ, ಕಂದಾಚಾರ ಬೆಳೆದು ಬಂದಿದೆ. ಸತ್ತ ಮೇಲೆ ದೆವ್ವ ಆಗುತ್ತಾರೆ ಎನ್ನುತ್ತಿದ್ದಾರೆ. ಇದು ನೂರಕಕ್ಕೆ ನೂರು ಸಾಧ್ಯವೇ ಇಲ್ಲ

ಎಂಜಿನಿಯರಿಂಗ್, ವೈದ್ಯಕೀಯ ಓದಿದರೇ ಮಾತ್ರ ಕೆಲಸ ಸಿಗುತ್ತದೆ ಎಂಬ ಭಾವನೆ ಜನರಲ್ಲಿ ಬೆಳೆದಿದೆ. ನೀವು ಯಾವುದೇ ವಿಷಯವನ್ನು ಓದಿದರೂ ಅದರಲ್ಲಿ ಪ್ರೌಢಿಮೆ ಬೆಳೆಸಿಕೊಳ್ಳಬೇಕು. ಪ್ರೌಢಿಮೆ ಬೆಳೆಸಿಕೊಂಡರೇ ಯಶಸ್ಸು ಸಾಧ್ಯವಾಗುತ್ತದೆ. ಮೇರಿಟ್ ಕೆಲವರಿಗೆ ಮಾತ್ರ ಎಂಬ ಭಾವನೆ ಸರಿಯಲ್ಲ. ಅನುವಂಶಿಯವಾಗಿ ಜ್ಞಾನ ಇರುವುದಿಲ್ಲ, ಜ್ಞಾನ ಬೆಳೆಸಿಕೊಳ್ಳುವ ನಿಟ್ಟಿನಲ್ಲಿ ಪ್ರಯತ್ನಿಸಬೇಕು ಎಂದು ಅವರು ಸಲಹೆ ನೀಡಿದರು.

ಹುಟ್ಟು ಸಾವಿನ ನಡುವೆ ಸಮಾಜಮುಖಿಯಾಗಿ ಬದುಕಬೇಕು. ಸಮಾಜದಿಂದ ತೆಗೆದುಕೊಳ್ಳುವದ ಬದಲು ಸಮಾಜಕ್ಕಾಗಿ ಏನಾದರೂ ಕೊಡುಗೆ ನೀಡಬೇಕು. ಜವಾಬ್ದಾರಿಯುತ ನಾಗರಿಕನಾಗಿ ಜೀವನ ಸಾಗಿಸಬೇಕು. ಶಿಕ್ಷಣದಿಂದ ತನ್ನ ಮತ್ತು ತನ್ನ ಕುಟುಂಬದವರಿಗಾಗಿ ಬದುಕುವವರಿದ್ದಾರೆ. ಇದರ ಬದಲು ಇತರರಿಗಾಗಿ ಬದುಕುವಂತಹ ಶಿಕ್ಷಣ ಸಿಗಬೇಕಿದೆ ಎಂದರು.

ಈ ಕಾಲೇಜು ಆರಂಭವಾಗಿ 50 ವರ್ಷವಾಗಿದ್ದು, ಪ್ರಸ್ತುತ 3600 ವಿದ್ಯಾರ್ಥಿಗಳು ಓದುತ್ತಿರುವುದು ಸಂತೋಷಕರ. ಅದರಲ್ಲೂ ಗ್ರಾಮೀಣ ಭಾಗದಿಂದ ಬಂದಿರುವ ಶೇ.70 ವಿದ್ಯಾರ್ಥಿಗಳು ಓದುತ್ತಿದ್ದಾರೆ.

### ಮೇಕೆದಾಟು ಯೋಜನೆ ಕಾರ್ಯಗತ ಮಾಡಿ

**ಮೈಸೂರು:** ತಮಿಳುನಾಡಿನ ಯಾವುದೇ ಬೆದರಿಕೆಗೆ ಮಣಿಯದೇ ಮೇಕೆದಾಟು ಯೋಜನೆ ಯನ್ನು ಕಾರ್ಯಗತ ಮಾಡುವಂತೆ ಜಿಲ್ಲಾ ಕಾವೇರಿ ಕ್ರಿಯಾ ಸಮಿತಿಯು ಮುಖ್ಯಮಂತ್ರಿ ಸಿದ್ದರಾಮ ಯ್ಯ ಅವರಿಗೆ ಮನವಿ ಸಲ್ಲಿಸಿದೆ. ಸಮಿತಿಯ ಪ್ರಧಾನ ಸಂಚಾಲಕ ತಾಯೂ ರು ವಿಠಲ ಮೂರ್ತಿ, ಗ.ಶಾ. ಭೋಗನಂದೀಶ್, ಗೋ.ಹ. ಶೆಟ್ಟಿ, ಸಿ. ಸಂಪತ್, ಪ್ರಕಾಶರಾವ್ ಘೋರ್ಪಡೆ, ಸಿದ್ದಲಿಂಗಪ್ಪ, ಮ. ಜಯ ಪ್ರಕಾಶ್ ಅವರು ಬುಧವಾರ ಮನವಿ ಸಲ್ಲಿಸಿ, ಕೇಂದ್ರಕ್ಕೆ ಮನವರಿಕೆ ಮಾಡಿಕೊಡಲು ಪ್ರಧಾನಿ ಬಳಿಗೆ ನಿಯೋಗ ಕರೆದುಕೊಂಡು ಹೋಗಬೇಕು ಎಂದು ಆಗ್ರಹಿಸಿದರು.

**ಇಂದು- ನಾಳೆ ಪ್ರತಿಭಟನೆ:** ಮೇಕೆದಾಟು ಯೋಜನೆಯ ವಿಷಯದಲ್ಲಿ ರಾಜ್ಯದ ನಿಲುವನ್ನು ಬೆಂಬಲಿಸಿ ಹಾಗೂ ತಮಿಳುನಾಡು ನಿಲುವನ್ನು ವಿರೋಧಿಸಿ ಕರ್ನಾಟಕ ಸೇನಾ ಪಡೆಯು ಏ.9 ರಂದು ಬೆಳಗ್ಗೆ 11.30ಕ್ಕೆ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟಿಸಲಿದೆ ಎಂದು ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ ತಿಳಿಸಿದ್ದಾರೆ. ಕರ್ನಾಟಕ ಜನಪರ ಶಕ್ತಿ ವೇದಿಕೆಯು ಏ.10 ರಂದು ಬೆಳಗ್ಗೆ 10.30ಕ್ಕೆ ನಗರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಬಳಿಯಿಂದ ಮೇಕೆದಾಟು ಚಲೋ ನಡೆಸಲಿದೆ ಎಂದು ಅಧ್ಯಕ್ಷ ಆರ್. ಮಧು ತಿಳಿಸಿದ್ದಾರೆ.

ಈ ಸಂಸ್ಥೆಯು ಶತಮಾನೋತ್ಸವ ಪೂರೈಸಿ ಮತ್ತಷ್ಟು ಬೆಳೆಯಲಿ ಎಂದು ಸಿದ್ದರಾಮಯ್ಯ ಹಾರೈಸಿದರು.

**ಶಿಕ್ಷಣ ಕ್ರಾಂತಿ:** ಅಧ್ಯಕ್ಷತೆ ವಹಿಸಿದ್ದ ಕಂದಾಯ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ವಿ. ಶ್ರೀನಿವಾಸ ಪ್ರಸಾದ್ ಮಾತನಾಡಿ, ಜೆಎಸ್‌ಎಸ್ ಮಹಾವಿದ್ಯಾಪೀಠವು ಅನ್ನದಾಸೋಹ ಜೊತೆಗೆ ಅಕ್ಷರ ದಾಸೋಹ ನೀಡುತ್ತಿದೆ. ದೇಶದ ಭೂಪಟದಲ್ಲಿ ಶಿಕ್ಷಣ ಕ್ರಾಂತಿ ಮಾಡಿರುವ ಕೀರ್ತಿ ಜೆಎಸ್‌ಎಸ್ ಸಂಸ್ಥೆಗೆ ಸಲ್ಲುತ್ತದೆ ಎಂದರು.

ನಮ್ಮ ದೇಶವು ವೈವಿಧ್ಯತೆ ಹೊಂದಿದ್ದರೂ ಏಕತೆ ಮಾತ್ರ ಇನ್ನೂ ಸಾಧ್ಯವಾಗಿಲ್ಲ. ವಿದ್ಯಾರ್ಥಿಗಳು ಏಕತೆ ಕಟ್ಟಬೇಕು. ಆ ಮೂಲಕ ತಾರತಮ್ಯ ಹೋಗಲಾಡಿಸಬೇಕು ಎಂದು ಅವರು ಕರೆ ನೀಡಿದರು. ಮಹಿಳಾ ವಿದ್ಯಾರ್ಥಿ ನಿಲಯ ವಿಸ್ತೃತ ಕಟ್ಟಡ ಉದ್ಘಾಟಿಸಿದ ಸಕ್ಕರೆ ಮತ್ತು ಸಹಕಾರ ಸಚಿವ ಎಚ್.ಎಸ್. ಮಹದೇವ ಪ್ರಸಾದ್ ಮಾತನಾಡಿ, 40 ವರ್ಷಗಳ ಹಿಂದೆ ಇದೇ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದನ್ನು ಸ್ಮರಿಸಿದರು.

ಸಮುದಾಯ ಕಾಲೇಜು- ಅಡ್ವಾನ್ಸಡ್ ಡಿಪ್ಲೊಮಾ ಕೋರ್ಸ್ ಪರಿಚಯ ಪತ್ರ, ಅನಿಮೇಷನ್ ಪ್ರಯೋಗಾಲಯವನ್ನು ಲೋಕೋಪ ಯೋಗಿ ಸಚಿವ ಡಾ. ಎಚ್.ಸಿ. ಮಹದೇವಪ್ಪ ಉದ್ಘಾಟಿಸಿದರು. ಕೌಶಲಾಧರಿತ ಉನ್ನತ ಶಿಕ್ಷಣದ ವೆಬ್‌ಸೈಟ್‌ನನ್ನು ಶಾಸಕ ಎಂ.ಕೆ. ಸೋಮಶೇಖರ್, ಕೌಶಲಾಧರಿತ ಪದವಿ ಕೋರ್ಸ್‌ಗಳ ಪರಿಚಯ ಪತ್ರವನ್ನು ಮೇಯರ್ ಆರ್. ಲಿಂಗಪ್ಪ ಬಿಡುಗಡೆಗೊಳಿಸಿದರು.

ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಜಿಪಂ ಅಧ್ಯಕ್ಷೆ ಡಾ. ಪುಷ್ಪಾವತಿ ಅಮರನಾಥ್, ಉಪಾಧ್ಯಕ್ಷ ಎಲ್. ಮಾದಪ್ಪ, ಉಪ ಮೇಯರ್ ಎಂ. ಮಹದೇವಮ್ಮ, ಪಾಲಿಕೆ ಸದಸ್ಯರಾದ ಸುನಿಲ್, ಸುನಿಲ್‌ಕುಮಾರ್, ಎಂಡಿಎ ಅಧ್ಯಕ್ಷ ಕೆ.ಆರ್. ಮೋಹನ್‌ಕುಮಾರ್, ಮಾಜಿ ಶಾಸಕರಾದ ಪ್ರೊ.ಕೆ.ಆರ್. ಮಲ್ಲಿಕಾರ್ಜುನಪ್ಪ, ಎಸ್. ಬಾಲರಾಜ್ ಇದ್ದರು. ಕಾಲೇಜು ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ಎ. ಸಾಂಬ ಶಿವಯ್ಯ ಸ್ವಾಗತಿಸಿದರು. ಪ್ರಾಂಶುಪಾಲ ಪ್ರೊ.ಎಂ.ಬಿ. ಮಲ್ಲಿಕಾರ್ಜುನ ಪಂಡಿತ್ ವಂದಿಸಿದರು. ಪ್ರೊ.ಡಿ.ಎಸ್. ಸದಾಶಿವಮೂರ್ತಿ ನಿರೂಪಿಸಿದರು.

ಮೈಸೂರು ಮಿತ್ರ ದಿನಪತ್ರಿಕೆ 09-04-2015

## ಜೆಎಸ್‌ಎಸ್ ಕಾಲೇಜು ಸುವರ್ಣ ಮಹೋತ್ಸವಕ್ಕೆ ಚಾಲನೆ

# ಶಿಕ್ಷಣ ಪಡೆದವರೆಲ್ಲಾ ಜ್ಞಾನಿಗಳಲ್ಲ: ಸಿಎಂ ಸಿದ್ದು

ಮೈಸೂರು, ಏ. ೮ (ಎಂಕೆ)– ಬೌದ್ಧಿಕ ಮತ್ತು ಮಾನಸಿಕ ವಿಕಾಸಕ್ಕೆ ಶಿಕ್ಷಣ ಅತ್ಯಗತ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಸುವರ್ಣ ಮಹೋತ್ಸವ ಸಮಾರಂಭವನ್ನು ಬುಧವಾರ ಉದ್ಘಾಟಿಸಿ ಮಾತನಾಡಿದ ಅವರು, ಯಾರು ಶಿಕ್ಷಣದಿಂದ ವಂಚಿತರಾಗಬಾರದು. ಪ್ರತಿಯೊಬ್ಬರಿಗೂ ಗುಣಮಟ್ಟದ ಮತ್ತು ಬದುಕಿಗೆ ಸಂಬಂಧಿಸಿದ ಶಿಕ್ಷಣ ದೊರೆಯಬೇಕು. ಇದರಿಂದ ವ್ಯಕ್ತಿಗೆ ವ್ಯಕ್ತಿತ್ವ ಮತ್ತು ಬದುಕು ರೂಪಿಸಿಕೊಳ್ಳಲು ಸಹಕಾರಿಯಾಗುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ ಸಮಾಜದಲ್ಲಿ ಜವಾಬ್ದಾರಿಯುತ ನಾಗರಿಕನಾಗಿ ಬಾಳಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಮಾನಸಿಕ ವಿಕಸನದಿಂದ ವ್ಯಕ್ತಿಯ ಸರ್ವಾಂಗೀಣ ಅಭಿವೃದ್ಧಿ ಸಾಧ್ಯವಾಗುತ್ತದೆ. ಮಾನಸಿಕ ವಿಕಸನ ಶಿಕ್ಷಣದಿಂದ ಆಗುತ್ತದೆ. ಇಂದು ಶಿಕ್ಷಣ ಪಡೆದ ಎಷ್ಟೋ ಪದವೀಧರರು ಬದುಕನ್ನು ಅರ್ಥಮಾಡಿಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಇದಕ್ಕೆ ಅವರಲ್ಲಿನ ವೈಚಾರಿಕ ಜ್ಞಾನದ ಕೊರತೆಯೇ ಕಾರಣ. ಶಿಕ್ಷಣ ಪಡೆದ ಮಾತ್ರಕ್ಕೆ ಜ್ಞಾನಿಗಳು ಎಂದು ಹೇಳಲಾಗದು. ನನ್ನ ಪ್ರಕಾರ ಶಿಕ್ಷಣದ ಜತೆಗೆ ವೈಚಾರಿಕ ಜ್ಞಾನ ಬೆಳೆಸಿಕೊಂಡಿರುವವನೇ ನಿಜವಾದ ಜ್ಞಾನಿ ಎಂದು ತಿಳಿಸಿದರು.

**ಮೌಢ್ಯ ಮತ್ತು ಕಂದಾಚಾರದ ಬಗ್ಗೆ ಎಚ್ಚರ:** ಸಾಮಾಜಿಕ ವ್ಯವಸ್ಥೆಯೊಂದಿಗೆ ಮೌಢ್ಯ ಮತ್ತು ಕಂದಾಚಾರಗಳು ಬೆಳೆದುಕೊಂಡು ಬಂದಿವೆ. ಇವುಗಳನ್ನು ಶೋಧಿಸಿ ಅರ್ಥಮಾಡಿಕೊಳ್ಳುವ ಶಕ್ತಿಯು ಅಗತ್ಯವಿದೆ. ಮನುಷ್ಯ ಸತ್ತ ಬಳಿಕ ದೆವ್ವ ಆಗುತ್ತಾನೆ ಎಂಬ ಮೂಢನಂಬಿಕೆ ಜನರಲ್ಲಿದೆ. ಮಾಧ್ಯಮಗಳು ಅಂತಹ ಕಾರ್ಯಕ್ರಮ ಪ್ರಸಾರ ಮಾಡುತ್ತಿವೆ. ವೈಜ್ಞಾನಿಕವಾಗಿ ಮನುಷ್ಯ ಸತ್ತ ನಂತರ ಅಶರೀರವಾಗಿರಲು ಸಾಧ್ಯವೇ ಇಲ್ಲ. ಸತ್ಯ, ಅಸತ್ಯ, ನಂಬಿಕೆ, ಅಪನಂಬಿಕೆ ಅವರವರ ಅರಿವಿಗೆ ಬಿಟ್ಟಿದ್ದು. ಹಾಗಾಗಿ ಮೊದಲು ನಾವು ವೈಚಾರಿಕ ಮತ್ತು ವೈಜ್ಞಾನಿಕ ಚಿಂತನೆ ಮೈಗೂಡಿಸಿಕೊಳ್ಳಬೇಕೆಂದು ಅವರು ಸಲಹೆ ನೀಡಿದರು.



ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಸುವರ್ಣ ಮಹೋತ್ಸವ ಸಮಾರಂಭವನ್ನು ಬುಧವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿ, ಸಚಿವರಾದ ಡಾ.ಎಚ್.ಸಿ.ಮಹದೇವಪ್ಪ, ವಿ.ಶ್ರೀನಿವಾಸಪ್ರಸಾದ್, ಎಚ್.ಎಸ್.ಮಹದೇವಪ್ರಸಾದ್, ಶಾಸಕ ಎಂ.ಕೆ.ಸೋಮಶೇಖರ್, ಜಿಪಂ ಅಧ್ಯಕ್ಷೆ ಡಾ.ಪುಷ್ಪಾ ಅಮರನಾಥ್, ಮೇಯರ್ ಆರ್.ಲಿಂಗಪ್ಪ, ಉಪ ಮೇಯರ್ ಎಂ.ಮಹದೇವಮ್ಮ ಮತ್ತಿತರರು ಚಿತ್ರದಲ್ಲಿದ್ದಾರೆ.

**ಪ್ರೌಢಿಮೆ ಬೆಳೆಸಿಕೊಳ್ಳಿ:** ಇಂದಿನ ವಿದ್ಯಾರ್ಥಿಗಳಲ್ಲಿ ಮೆಡಿಕಲ್ ಅಥವಾ ಇಂಜಿನಿಯರಿಂಗ್ ಓದಿದರೆ ಮಾತ್ರ ಬದುಕಲು ಸಾಧ್ಯ ಎನ್ನುವ ಮನೋಭಾವ ಮನೆ ಮಾಡಿದೆ. ಮೊದಲು ಈ ರೀತಿಯ ಮನೋಭಾವದಿಂದ ಹೊರಬರಬೇಕು. ಯಾವುದೇ ವಿಷಯ ಓದಿದರೂ ಅದರಲ್ಲಿ ಪ್ರೌಢಿಮೆ ಬೆಳೆಸಿಕೊಳ್ಳಬೇಕು. ಆಗ ಬದುಕಿನಲ್ಲಿ ಯಶಸ್ಸು ಗಳಿಸಬಹುದು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

'ಮೆರಿಟ್' ವಿದ್ಯಾರ್ಥಿಗಳು ಬಹಳ ಪ್ರತಿಭಾನ್ವಿತರಾಗಿರುತ್ತಾರೆ. ಅವರ ರಕ್ತ, ಜೀನ್ಸ್‌ನಲ್ಲಿ ಬುದ್ಧಿವಂತಿಕೆ ಬಂದಿರುತ್ತದೆ ಎಂದು ಹೇಳಲಾಗುತ್ತದೆ. ನಾನೊಬ್ಬ ವಿಜ್ಞಾನದ ವಿದ್ಯಾರ್ಥಿಯಾಗಿ ಹೇಳುವುದಾದರೆ ಅದು ನೂರಕ್ಕೆ ನೂರರಷ್ಟು ಸುಳ್ಳು. ಸತತ ಅಧ್ಯಯನ, ಶ್ರಮ, ಶ್ರದ್ಧೆ, ಗುರಿಯಿದ್ದರೆ ಯಾರು ಬೇಕಾದರೂ ಯಶಸ್ವಿಯಾಗಬಹುದು. ಹುಟ್ಟು ಆಕಸ್ಮಿಕ, ಸಾವು ಖಚಿತ. ಹುಟ್ಟಿದ ಮೇಲೆ ಬದುಕನ್ನು ಸಾರ್ಥಕ ಮಾಡಿಕೊಳ್ಳಬೇಕು. ನಮಗಾಗಿ ಅಲ್ಲದಿದ್ದರೂ ಪರರಿಗಾಗಿ ಬದುಕುತ್ತೇವೆ ಎನ್ನುವ ಮನೋಭಾವ ಬೆಳೆಸಿಕೊಳ್ಳಬೇಕು. ಇಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಾಕಷ್ಟು ಬೆಳೆದಿದೆ. ಎಲ್ಲಾ ಸವಲತ್ತುಗಳು ದೊರೆಯುತ್ತಿವೆ. ಇದನ್ನು ಬಳಸಿಕೊಂಡು ಸಮಾಜದಲ್ಲಿ ಮುಂದೆ ಬನ್ನಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿದ್ಯಾರ್ಥಿಗಳಿಗೆ ನೀತಿ ಪಾಠ ಬೋಧಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ವಿ.ಶ್ರೀನಿವಾಸ ಪ್ರಸಾದ್ ಮಾತನಾಡಿ, ಜೆಎಸ್‌ಎಸ್ ಮಹಾವಿದ್ಯಾಪೀಠವು ಲಕ್ಷಾಂತರ ವಿದ್ಯಾರ್ಥಿಗಳಿಗೆ ಅನ್ನ ಮತ್ತು ಅಕ್ಷರ ದಾಸೋಹ ನಡೆಸುತ್ತಿದೆ. ವಚನಕಾರರ ಹಾದಿಯಲ್ಲಿ ತನ್ನ ಸೇವಾ ಕಾರ್ಯ ಮುಂದುವರಿಸಿರುವುದು ಶ್ಲಾಘನಾರ್ಹ ಎಂದರು. ಐದು ಸಾವಿರ ವರ್ಷಗಳ ಇತಿಹಾಸ ಹೊಂದಿರುವ ಭಾರತದಲ್ಲಿ ಇಂದಿಗೂ ಸಾಮರಸ್ಯ ಬದುಕು ಬಂದಿಲ್ಲ. ರಾಷ್ಟ್ರೀಯ ಏಕತೆ ಬಗ್ಗೆ ಭಾಷಣ ಮಾಡುತ್ತೇವೆ. ನಿಜವಾಗಲೂ ಆ ಏಕತೆ ಇದೆಯೇ ಎಂಬುದನ್ನು ಎಲ್ಲರೂ ಆತ್ಮಾವಲೋಕನ ಮಾಡಿಕೊಳ್ಳಬೇಕು. ವಿದ್ಯಾರ್ಥಿಗಳು ಸಾಮಾಜಿಕ ಚಿಂತನೆ ಮೈಗೂಡಿಸಿಕೊಳ್ಳಬೇಕು. ನಾಲ್ಕು ಗೋಡೆಗಳ ನಡುವಿನ ಶಿಕ್ಷಣದ ಹೊರತಾಗಿ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ಇದರಿಂದ ವ್ಯಕ್ತಿತ್ವ ವಿಕಸನ ಸಾಧ್ಯವಾಗುತ್ತದೆ ಎಂದು ತಮ್ಮ ಕಾಲೇಜು ದಿನಗಳನ್ನು ಸ್ಮರಿಸಿದರು.

ಸಚಿವ ಎಚ್.ಎಸ್.ಮಹದೇವ ಪ್ರಸಾದ್ ಮಾತನಾಡಿದರು. ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು. ಸಚಿವ ಡಾ.ಎಚ್.ಸಿ.ಮಹದೇವಪ್ಪ, ಶಾಸಕ ಎಂ.ಕೆ.ಸೋಮಶೇಖರ್, ಜಿಪಂ ಅಧ್ಯಕ್ಷೆ ಡಾ.ಪುಷ್ಪಾ ಅಮರನಾಥ್, ಉಪಾಧ್ಯಕ್ಷ ಎಲ್.ಮಾದಪ್ಪ, ಮೇಯರ್ ಆರ್.ಲಿಂಗಪ್ಪ, ಉಪ ಮೇಯರ್ ಎಂ.ಮಹದೇವಮ್ಮ, ಮುಡಾ ಅಧ್ಯಕ್ಷ ಕೆ.ಆರ್.ಮೋಹನ ಕುಮಾರ್, ಮಾಜಿ ಶಾಸಕರಾದ ಎಸ್.ಬಾಲರಾಜು, ಪ್ರೊ.ಕೆ.ಆರ್. ಮಲ್ಲಿಕಾರ್ಜುನಪ್ಪ ಮತ್ತಿತರರು ಉಪಸ್ಥಿತರಿದ್ದರು.

> ‘೫೪ ವಿದ್ಯಾರ್ಥಿಗಳಿಂದ ಆರಂಭವಾದ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಇಂದು ಸಾವಿರಾರು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ಮೂಲಕ ಹೆಮ್ಮರವಾಗಿ ಬೆಳೆದು ನಿಂತಿದೆ. ಸುಮಾರು ಒಂದು ಸಾವಿರ ವರ್ಷಗಳ ಇತಿಹಾಸ ಹೊಂದಿರುವ ಸುತ್ತೂರು ಮಠ ಅನ್ನ ದಾಸೋಹ ಮತ್ತು ಅಕ್ಷರ ದಾಸೋಹದಲ್ಲಿ ಮುಂಚೂಣಿಯಲ್ಲಿದ್ದು, ವಿಶೇಷವಾಗಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿರುವುದು ಶ್ಲಾಘನೀಯ.
>
> -ಸಿದ್ದರಾಮಯ್ಯ, ಮುಖ್ಯಮಂತ್ರಿ

ಪ್ರಜಾನುಡಿ ದಿನಪತ್ರಿಕೆ 09-04-2015

# ಸುತ್ತೂರು ಮಠದ ಕಾರ್ಯಕ್ಕೆ ಸಿಎಂ ಶ್ಲಾಘನೆ

ಮೈಸೂರು: ನಾಡಿನ ಮಕ್ಕಳಿಗೆ ಅನ್ನ ಹಾಗೂ ಅಕ್ಷರ ದಾಸೋಹ ನೀಡುತ್ತಿರುವ ಸುತ್ತೂರು ಮಠದ ಸೇವೆ ಶ್ಲಾಘನೀಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮೆಚ್ಚುಗೆ ವ್ಯಕ್ತಪಡಿಸಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ಬುಧವಾರ ಆಯೋಜಿಸಿದ್ದ ಊಟಿ ರಸ್ತೆಯ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಸುವರ್ಣ ಮಹೋತ್ಸವ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಸಾವಿರಾರು ವರ್ಷಗಳ ಸುದೀರ್ಘ ಇತಿಹಾಸ ಹೊಂದಿರುವ ಸುತ್ತೂರು ಮಠವು, ಶೇ.60-70 ರಷ್ಟು ಗ್ರಾಮೀಣ ಮಕ್ಕಳಿಗೆ ಜ್ಞಾನಾರ್ಜನೆ ನೀಡುತ್ತಿದೆ. ಹಾಸ್ಟೆಲ್‌ಗಳನ್ನು ಪ್ರಾರಂಭಿಸುವ ಮೂಲಕ ಹಸಿವಿನಿಂದ ಬಳಲುತ್ತಿದ್ದ ಬಡ ವರ್ಗದವರ ಮಕ್ಕಳಿಗೆ ಅನ್ನ ನೀಡಿದೆ. ಶಿಕ್ಷಣದಿಂದ ವಂಚಿತರಾಗದೆ, ಸರ್ವರಿಗೂ ವಿದ್ಯೆ ಸಿಗಬೇಕು. ಅದರಲ್ಲೂ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಸಿಕ್ಕರೆ, ಒಳ್ಳೆಯ ವ್ಯಕ್ತಿತ್ವ ರೂಪುಗೊಳ್ಳಲು ಸಾಧ್ಯ. ಸಮಾಜದಲ್ಲಿ ಉತ್ತಮ ನಾಗರೀಕರಾಗಿ ಬದಲು ಸಾಧ್ಯವಾಗುತ್ತದೆ. ಹಾಗಾಗಿ ಜೆಎಸ್‌ಎಸ್ ಸಂಸ್ಥೆ ಅಕ್ಷರ ದಾಸೋಹದ ಮೂಲಕ ಸಮಾಜದ ಸೇವೆ ಮಾಡುತ್ತಿದೆ ಎಂದು ಶ್ಲಾಘಿಸಿದರು.

ದೈಹಿಕ ಹಾಗೂ ಮಾನಸಿಕ ವಿಕಾಸ ಎರಡು ಒಟ್ಟಾಗಿ ಬೆಳವಣಿಗೆಯಾಗಬೇಕು. ಧರ್ಮದ ತಳಹದಿ ಮೇಲೆ ಶಿಕ್ಷಣವಿರಬೇಕು. ಮಾನವೀಯ ಮೌಲ್ಯಗಳನ್ನು ಜೀವನ ಉದ್ದಕ್ಕೂ ಮೈಗೂಡಿಸಿಕೊಳ್ಳಬೇಕು. ಬಹುತೇಕರು ಉತ್ತಮ ಶಿಕ್ಷಣ ಪಡೆದಿದ್ದರೂ, ಆದರ್ಶಪ್ರಾಯವಾಗಿ ಬದುಕುವಲ್ಲಿ ವಿಫಲರಾಗುತ್ತಿದ್ದಾರೆ. ಆದ್ದರಿಂದ ಜ್ಞಾನದ ಜತೆಗೆ, ವೈಚಾರಿಕತೆ ಇರಬೇಕು. ಇಲ್ಲವಾದಲ್ಲಿ ಜ್ಞಾನಿಗಳು ಎಂದು ಹೇಳಿಕೊಳ್ಳಲು ಅರ್ಹರಾಗುವುದಿಲ್ಲ ಎಂದರು.

ಶತಮಾನಗಳಿಂದಲೂ ಮೌಢ್ಯ ಹಾಗೂ ಕಂದಾಚಾರ ಜನರ ಜತೆಯಲ್ಲೇ ಬೆಳೆದು ಬಂದಿವೆ. ಇದಕ್ಕೆ ಪೂರಕವೆಂಬಂತೆ ಮಾಧ್ಯಮಗಳು ಜನರಲ್ಲಿ ಮೌಢ್ಯವನ್ನೇ ಬಿತ್ತುತ್ತಿವೆ. ಮನುಷ್ಯ ಸತ್ತಮೇಲೆ ದೆವ್ವವಾಗುತ್ತಾನೆ ಎಂದು ಜನರ ಮನಸ್ಸಲ್ಲಿ ಬಿಂಬಿಸುತ್ತಿವೆ. ನಿತ್ಯ ಬೆಳಗ್ಗೆ ಟಿವಿಗಳಲ್ಲಿ ಮೌಢ್ಯಗಳನ್ನು ಬಿಂಬಿಸುವ ಕಾರ್ಯಕ್ರಮಗಳೇ ಹೆಚ್ಚಾಗಿ ಪ್ರಸಾರವಾಗುತ್ತಿವೆ. ಆದರೆ, ಸತ್ಯ ಹಾಗೂ ಅಸತ್ಯದ ಬಗ್ಗೆ 12ನೇ ಶತಮಾನದಲ್ಲಿ ಬಸವಣ್ಣ ಹೇಳಿದ್ದನ್ನು ನೆನಪಿಸಿಕೊಳ್ಳಬೇಕು.



ಸತ್ಯವೇ ಸ್ವರ್ಗ, ಅಸತ್ಯವೇ ನರಕ ಎಲ್ಲವೂ ಇಲ್ಲೇ ಇದ್ದು, ಬೇರೆಲ್ಲೂ ಹುಡುಕಬಾರದು ಎಂಬುದಾಗಿ ಅರ್ಥಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಏನೇ ಕಟ್ಟದು, ಒಳ್ಳೆಯದು ನಡೆದರೂ, ನನ್ನ ಹಣೆ ಬರಹ ಸರಿಯಲ್ಲ ಎಂದು ಹೇಳುತ್ತೇವೆ. ಆದರೆ, ಯಾರ ಹಣೆ ಬರಹವನ್ನು ಯಾವ ದೇವರೂ ಬರೆಯುವುದಿಲ್ಲ. ಸಾಧನೆಗೆ ನಮ್ಮ ಹಾಗೂ ಪೋಷಕರ ಶ್ರಮ, ಪೂರಕ ವಾತಾರಣ ಕಾರಣವಾಗಿರುತ್ತದೆ. ಇಲ್ಲವಾದಲ್ಲಿ ಯಾವ ಸಾಧನೆಯೂ ಆಗುವುದಿಲ್ಲ. ಇದನ್ನು ಅರಿತು, ನಮ್ಮ ಕಷ್ಟ-ಸುಖಗಳಿಗೆ ಹಣೆಬರಹ ಎಂದು ಸುಮ್ಮನೇ ಕೂರದೆ ಸಾಧನೆಗೆ ನಿರಂತರವಾಗಿ ಶ್ರಮಿಸಬೇಕು ಎಂದು ಮನವರಿಕೆ ಮಾಡಿಕೊಟ್ಟರು.

ಜೆಎಸ್‌ಎಸ್ ಸಂಸ್ಥೆಯಲ್ಲಿ ಕೌಶಲ್ಯಾಧಾರಿತ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಈ ದಿಕ್ಕಿನಲ್ಲಿ ಸರ್ಕಾರವೂ ಚಿಂತಿಸಿದ್ದು, ಕೌಲಶ್ಯ ಆಧಾರಿತ ತರಬೇತಿ ನೀಡಲು ಪ್ರಾಧಾನ್ಯತೆ ನೀಡಲಾಗಿದೆ. ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳು ಕೇವಲ ಡಾಕ್ಟರ್ ಅಥವಾ ಎಂಜಿನಿಯರಿಂಗ್ ಮಾಡಿದರೆ ಮಾತ್ರ ಉದ್ಯೋಗ ಸಿಗಲಿದೆ ಎಂದು ತಪ್ಪಾಗಿ ಅರ್ಥಮಾಡಿಕೊಂಡಿದ್ದಾರೆ.

4ನೇ ಪುಟಕ್ಕೆ

## ಸುತ್ತೂರು ಮಠದ ಕಾರ್ಯಕ್ಕೆ ಶ್ಲಾಘನೆ



ಆದರೆ, ಯಾವುದೇ ವಿಷಯದ ಮೇಲೆ ಅಪಾರ ಜ್ಞಾನ ಬೆಳೆಸಿಕೊಂಡರೆ ಯಶಸ್ಸು ಸಾಧ್ಯ. ಜ್ಞಾನವನ್ನು ಪಡೆದುಕೊಳ್ಳಲು ಶ್ರಮ ಹಾಗೂ ಗುರಿ ಎರಡೂ ಮುಖ್ಯ ಎಂದು ಹೇಳಿದರು.

ಹುಟ್ಟು ಸಾವಿನ ನಡುವೆ ಯಾವ ರೀತಿ ಆದರ್ಶವಾಗಿ ಬದುಕಿದ್ದೇವೆ ಎಂದು ಮುಖ್ಯವಾಗುತ್ತದೆ. ಸಮಾಜದಿಂದ ನನಗೇನು ಸಿಗಲಿಲ್ಲ ಎನ್ನುವ ಬದಲು, ಸಮಾಜಕ್ಕೆ ನಾನೇನು ಕೊಡುಗೆ ಕೊಟ್ಟಿದ್ದೇವೆ ಎಂದು ನಾವೇ ಪ್ರಶ್ನಿಸಿಕೊಳ್ಳಬೇಕು. ನಿರ್ದಿಷ್ಟ ಗುರಿ ಇಟ್ಟುಕೊಂಡು, ಇತರರಿಗೋಸ್ಕರ ಬದುಕುವ ಮನೋಭಾವವನ್ನು ಶಿಕ್ಷಣದ್ದಿಂದ ಪಡೆದುಕೊಳ್ಳಬೇಕು ಎಂದರು.

**ಜೆಎಸ್‌ಎಸ್‌ನಿಂದ ಶಿಕ್ಷಣ ಕ್ರಾಂತಿ**

ಕಂದಾಯಮಂತ್ರಿ ವಿ.ಶ್ರೀನಿವಾಸಪ್ರಸಾದ್ ಮಾತನಾಡಿ, ಶಿಶುಪಾಲನಾ ಕೇಂದ್ರದಿಂದ ಉನ್ನತ ಶಿಕ್ಷಣದ ಕಾಲೇಜುಗಳನ್ನು ನಿರ್ಮಿಸಿರುವ ಸುತ್ತೂರು ಮಠ, ದೇಶದಲ್ಲೇ ಶಿಕ್ಷಣ ಕ್ರಾಂತಿ ಮಾಡಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸ್ವಾಮೀಜಿಗಳ ದಿವ್ಯ ದೃಷ್ಟಿಯಿಂದ ಆರಂಭವಾಗಿರುವ ಜೆಎಸ್‌ಎಸ್ ಸಂಸ್ಥೆ ಉದ್ದೇಶವನ್ನು ಸಕಾರಗೊಳಿಸುವ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಮುಂದಾಗಬೇಕು. ತಮ್ಮ ಕ್ಷೇತ್ರದಲ್ಲಿ ಪ್ರಾಮಾಣಿಕವಾಗಿ ತೊಡಗಿಸಿಕೊಳ್ಳಬೇಕಾದರೆ, ಶಿಕ್ಷಣ ಪ್ರಮುಖ ಪಾತ್ರ ವಹಿಸುತ್ತದೆ. ವಿದ್ಯಾರ್ಥಿಗಳು ಒಳ್ಳೆ ನಾಗರೀಕರಾದರೆ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯ. ತಾವು ಪಡೆದ ಉತ್ತಮ ಶಿಕ್ಷಣದಿಂದಲೇ ರಾಜಕೀಯ ಶ್ರೇಷ್ಠತೆ, ಘನತೆ, ಗೌರವ ಎತ್ತಿ ಹಿಡಿಯಲು ಸಾಧ್ಯವಾಯಿತು. ಎಂದು ತಿಳಿಸಿದರು.

ಜಗದ್ಗುರು ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು. ಸಹಕಾರ ಸಚಿವ ಎಚ್.ಎಸ್.ಮಹದೇವ ಪ್ರಸಾದ್, ಲೋಕೋಪಯೋಗಿ ಸಚಿವ ಎಚ್.ಸಿ.ಮಹದೇವಪ್ಪ, ಮೇಯರ್ ಆರ್.ಲಿಂಗಪ್ಪ, ಶಾಸಕ ಎಂ.ಕೆ.ಸೋಮಶೇಖರ್, ಉಪಮೇಯರ್ ಮಹದೇವಮ್ಮ, ಜಿಲ್ಲಾ ಪಂಚಾಯತ್ ಅಧ್ಯಕ್ಷೆ ಪುಷ್ಪಾ ಅಮರ್‌ನಾಥ್, ಉಪಾಧ್ಯಕ್ಷ ಎಲ್.ಮಾದಪ್ಪ, ಮುಡಾ ಅಧ್ಯಕ್ಷ ಮೋಹನ್‌ಕುಮಾರ್ ಹಾಗೂ ಮಾಜಿ ಎಂಎಲ್‌ಸಿ ಮಲ್ಲಿಕಾರ್ಜುನಪ್ಪ ಉಪಸ್ಥಿತರಿದ್ದರು.

## ವಿಜಯವಾಣಿ ದಿನಪತ್ರಿಕೆ 09-04-2015

# ಕೌಶಲ್ಯಾಭಿವೃದ್ಧಿ ಶಿಕ್ಷಣ ಅವಶ್ಯ

### ಮುಖ್ಯಮಂತ್ರಿ ಪ್ರತಿಪಾದನೆ ■ ಜೆಎಸ್ಎಸ್ ಕಾಲೇಜಿನ ಸುವರ್ಣ ಮಹೋತ್ಸವ

**ಮೈಸೂರು:** ಧರ್ಮದ ತಳಹದಿಯ ಮೇಲೆ ಮನಸ್ಸನ್ನು ವಿಕಸನಗೊಳಿಸುವ ಶಿಕ್ಷಣ ನೀಡುವ ಬದಲು ಕೌಶಲ ಅಭಿವೃದ್ಧಿಗೊಳಿಸುವ ಶಿಕ್ಷಣದ ಅಗತ್ಯವಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ನಗರದ ಊಟಿ ರಸ್ತೆಯಲ್ಲಿರುವ ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಸುವರ್ಣ ಮಹೋತ್ಸವ ಸಮಾರಂಭ ಹಾಗೂ ಸ್ನಾತಕೋತ್ತರ ಕೇಂದ್ರದ ಮೂರನೇ ಮಹಡಿಯನ್ನು ಬುಧವಾರ ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಣ ಎಲ್ಲರಿಗೂ ದೊರೆಯಬೇಕೆನ್ನುವ ನಿಟ್ಟಿನಲ್ಲಿ ಸರ್ಕಾರ ಹಲವು ಕಾರ್ಯಕ್ರಮ ಹಮ್ಮಿಕೊಂಡಿದೆ. ಆದರೆ ಈಗ ಗುಣಮಟ್ಟ ಹಾಗೂ ಕೌಶಲ ನೀಡುವ ಶಿಕ್ಷಣದತ್ತಲೂ ಗಮನಹರಿಸಬೇಕಿದೆ. ಇದರಿಂದ ವಿದ್ಯಾರ್ಥಿಗಳಿಗೆ ಭವಿಷ್ಯದಲ್ಲಿ ಉತ್ತಮ ಜೀವನ ರೂಪಿಸಲು ಸಾಧ್ಯವಾಗುತ್ತದೆ ಎಂದರು.

ಇಂಜಿನಿಯರಿಂಗ್, ಡಾಕ್ಟರ್ ಮಾಡುವುದೇ ಇಂದು ಶಿಕ್ಷಣ ಎನ್ನುವಂತಾಗಿದೆ. ಮೆರಿಟ್ ಎನ್ನುವುದು ರಕ್ತಗತವಾಗಿ ಬರುತ್ತದೆ, ನಮಗೆ ಆ ಅರ್ಹತೆ ಇಲ್ಲ, ಎಲ್ಲ ನನ್ನ ಹಣೆಬರಹ ಎನ್ನುವ ಭಾವನೆ ಅನೇಕ ವಿದ್ಯಾರ್ಥಿಗಳಲ್ಲಿದ್ದು, ಇದನ್ನು ಮೊದಲು ಬಿಡಬೇಕು. ವೈಚಾರಿಕತೆ ಮೈಗೂಡಿಸಿಕೊಂಡು ಸತ್ಯಾಸತ್ಯತೆಯನ್ನು ತಿಳಿದುಕೊಳ್ಳುವ, ಯಾವುದೇ ವಿಷಯವನ್ನು ಪರಾಮರ್ಶಿಸುವ ಗುಣ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಉಸ್ತುವಾರಿ ಸಚಿವ ವಿ.ಶ್ರೀನಿವಾಸಪ್ರಸಾದ್ ಮಾತನಾಡಿ, ಶಿಕ್ಷಣ ಇಂದು ಯಾಂತ್ರೀಕೃತವಾಗುತ್ತಿದ್ದು, ವಿದ್ಯಾರ್ಥಿಗಳ ಮುಂದಿನ ಬದುಕು ದುಸ್ತರ ಎನ್ನುವ ಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ವಿದ್ಯಾರ್ಥಿಗಳು, ಪಠ್ಯದ ಜತೆಗೆ ಪಠ್ಯೇತರ ಚಟುವಟಿಕೆಗಳಲ್ಲಿಯೂ ತೊಡಗಿಸಿಕೊಳ್ಳಬೇಕು ಎಂದರು.



ಮೈಸೂರಿನ ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಬುಧವಾರ ನಡೆದ ಸಮಾರಂಭದಲ್ಲಿ ಸುವರ್ಣ ಮಹೋತ್ಸವದ ಲಾಂಛನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಡುಗಡೆ ಮಾಡಿದರು. ಸುತ್ತೂರು ಶ್ರೀ, ವಿ.ಶ್ರೀನಿವಾಸಪ್ರಸಾದ್, ಎಚ್.ಸಿ.ಮಹದೇವಪ್ಪ ಮತ್ತಿತರರಿದ್ದರು.

### ಮೌಢ್ಯ ಬಿತ್ತುವ ಕೆಲಸ

ದೃಶ್ಯ ಮಾಧ್ಯಮಗಳು ಜನರಲ್ಲಿ ದೆವ್ವ, ಭೂತ, ಭವಿಷ್ಯ ಎಂದು ಮೌಢ್ಯ, ಕಂದಾಚಾರವನ್ನು ಬಿತ್ತುವ ಕೆಲಸ ಮಾಡುತ್ತಿವೆ. ಇದರಿಂದ ಸಮಾಜಕ್ಕೆ ಯಾವುದೇ ಪ್ರಯೋಜನವಿಲ್ಲ. ಸಮಾಜಕ್ಕೆ ಯಾವುದು ಬೇಕು, ಯಾವುದು ಬೇಡ ಎನ್ನುವುದನ್ನು ಜನರೇ ನಿರ್ಧರಿಸಬೇಕು.

ಸಿದ್ದರಾಮಯ್ಯ, ಮುಖ್ಯಮಂತ್ರಿ

ಸಹಕಾರ ಸಚಿವ ಎಚ್.ಎಸ್.ಮಹದೇವಪ್ರಸಾದ್ ಮಾತನಾಡಿದರು. ಈ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ, 50 ವರ್ಷಗಳ ಕಾಲೇಜಿನ ಲಾಂಛನ, ವೆಬ್‌ಸೈಟ್ ಬಿಡುಗಡೆಗೊಳಿಸಿದರೆ, ಲೋಕೋಪಯೋಗಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಅಡ್ವಾನ್ಸ್‌ಡ್ ಡಿಪ್ಲೊಮಾ ಕೋರ್ಸ್ ಪರಿಚಯ ಪತ್ರ ಹಾಗೂ ಮೇಯರ್ ಆರ್. ಲಿಂಗಪ್ಪ ಅವರು ಕೌಶಲಾಧಾರಿತ ಪದವಿ ಕೋರ್ಸ್‌ಗಳ ಪರಿಚಯ ಪತ್ರ ಬಿಡುಗಡೆಗೊಳಿಸಿದರು.

ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಶಾಸಕ ಎಂ.ಕೆ.ಸೋಮಶೇಖರ್, ಮಾಜಿ ಶಾಸಕ ಎಂ.ಮಲ್ಲಿಕಾರ್ಜುನಪ್ಪ, ಆರ್.ಬಾಲರಾಜ್, ಜಿಲ್ಲಾ ಪಂಚಾಯಿತಿ ಅಧ್ಯಕ್ಷೆ ಡಾ.ಪುಷ್ಪಾ ಅಮರನಾಥ್, ಉಪಾಧ್ಯಕ್ಷ ಎಲ್.ಮಾದಪ್ಪ, ಉಪ ಮೇಯರ್ ಮಹದೇವಮ್ಮ, ಶಿಕ್ಷಣ ಇಲಾಖೆ ಕಾರ್ಯದರ್ಶಿ ರಾಜಕುಮಾರ್ ಖತ್ರಿ ಇತರರು ಹಾಜರಿದ್ದರು. ಕಾರ್ಯಕ್ರಮಕ್ಕೂ ಮುನ್ನ ಮಾಜಿ ಶಾಸಕ ಆರ್.ಬಾಲರಾಜ್ ಚಿತ್ರನಟರ ಮಿಮಿಕ್ರಿ ಮಾಡಿ ವಿದ್ಯಾರ್ಥಿಗಳನ್ನು ರಂಜಿಸಿದರು.

## DECCAN HERALD 09-04-2015

### At a glance



Chief Minister Siddaramaiah launches the logo during the inauguration of golden jubilee celebration of JSS Arts, Science College, in Mysuru, on Wednesday. Suttur seer Shivaratri Deshikendraswami, Cooperation minster H S Mahadeva Prasad, Revenue Minister V Srinivas Prasad and others are seen. DH PHOTO



INDIAN EXPRESS 09-04-2015



Chief Minister Siddaramaiah inaugurating JSS PC centre in Mysuru on Wednesday. Sri Shivaratri Deshikendra Swami and Ministers V Srinivasa Prasad and H S Prasad and Congress MLA Vasu look on | S UDAYSHANKAR

# TV Channels Promoting Blinc

**Express News Service**

**Mysuru:** Chief Minister Siddaramaiah on Wednesday took a dig at private television channels, saying that they are trying to instil superstitious beliefs among people through its programmes and one should acquire rational education to judge whether such programmes are right or wrong.

He was speaking at the golden jubilee celebrations of JSS Arts, Commerce and Science College in the city.

He said in recent times, there are rigorous attempts to sow blind beliefs through television channels.

"They are at it in the morning itself," he said in an apparent reference to astrology programmes in local television channels. "TV channels say there are ghosts and human beings become ghosts after death. This is 100 per cent lie and impossible. Saint Basavanna had said everything happens on the earth and truth is heaven and untruth is hell," he said.

He advised students not to get carried by the saying that merit is hereditary.

"I have studied genetics in BSc and I know that merit is acquired character and not hereditary. It is only through sheer hard work that one can be meritorious and see success. There are nothing like fate," he said.

The Chief Minister said apart from quality education, one should acquire skills that are essential for life.

"Only then a student can shape his personality and life and become a responsible citizen. Only learning to read and write is not education but it should help people's overall development," he said. He said many despite having degrees and good education fail to understand life. This is because they lack rational thinking.

He hailed the contributions of Suttur Mutt towards education.

District Minister Srinivasa Prasad and Cooperation Minister H S Mahadeva Prasad also spoke. PWD Minister H C Mahadevappa, Shivarathri Deshikendra Swami of Suttur Mutt and others were present.

## 'CM SHOULD RESOLVE WAGE DISPARITY'

Mysuru: The members of PU College Lecturers' Association met Chief Minister Siddaramaiah at his residence on Wednesday and urged him to resolve the wage disparity between PU and degree college lecturers. Siddaramaiah assured them of addressing the issues at the earliest. President of the association Ravishankar stated in a press release that the file pertaining to pay anomaly is already cleared by the Primary and Secondary Education Department. Congress Leader Lakshmana said that if the government agrees to implement the Kumar G Nayak Report, the government will need ₹72.56 crore to nullify the wage disparity. **ENS**

## Follow Ideals of Lohia, Gandhi: CM

Today's youth should be taught philosophies of Ram Manohar Lohia, Karl Marx, Mahatma Gandhi and B R Ambedkar, said Chief Minister Siddaramaiah.

He was speaking after releasing 'Gandhi Pranitha Dharmadharshitwa', penned by socialist P Mallesh. The programme was organised by Ananya Prakashana.

The youths are influenced by the electronic and social media. They are mislead by the emotions of communalism than the preachings of Gandhi, he said.

"Communalism is like opium. The socialists and thinkers should join hands against it and start discussions on social issues like in the past," the CM said. Stat-